ಮುಂಗಾರು

ಸಂಪಾದಕ: ವಡ್ಡರ್ಸೆ ರಘುರಾಮ ಶೆಟ್ಟಿ

MUNGARU KRNL 46 ಸಂಪುಟ 3 ಸಂಚಿಕೆ 326

ಮಂಗಳೂರು, ಭಾನುವಾರ ಆಗಸ್ಟ್ 9, 1987

ಬೆಲೆ 90 ಪೈಸೆ (ಮುಂಬೈ ರೂ. 1-00) ಪುಟ 6+4

DONT JUDGE BY THE HAND OR THE CONTAINER

IT IS THE CONTENTS THAT MATTERS IT IS:

KADAMANE TEAS

ನೀಡುವ ಹಸ್ತ ಇಲ್ಲವೇ ಅಂದದ ಕಪ್‌ನಿಂದ ಚಹಾದ ಗುಣವಲ್ಲ.
ತಯಾರಿಸಿದ ಹುಡಿ ಯಾವುದು? ಇದೇ "ಕಾಡಮನೆ" ಚಾ ಹುಡಿ.

CONTACT

PUNJA & CO, Mulky, S. K.

(Phone No. MULKI 26 MANGALORE 7368)

ಜಾರ್ಖಂಡ್ ಮೋರ್ಚಾ ಅಧ್ಯಕ್ಷನ ಹತ್ಯೆ

ಜಮ್‌ಶೆಡ್‌ಪುರ, ಆ.8- ಜಾರ್ಖಂಡ್ ಮುಕ್ತಿ ಮೋರ್ಚಾದ ಅಧ್ಯಕ್ಷ ನಿರ್ಮಲ್ ಮಹತೋ ಅವರನ್ನು ಇಂದು ಬಿಷ್ಟುಪುರದಲ್ಲಿ ಚಿಕ್ಕೋನೆಸ್ ಹೌಸ್‌ನಿಂದ ಹೊರ ಬರುವಾಗ ದುಷ್ಕರ್ಮಿಗಳು ಗುಂಡಿಕ್ಕಿ ಕೊಲೆಗೈದರು. ಅವರ ಜೊತೆಗಿದ್ದ ವಿಹಾರ ಅಸೆಂಬ್ಲಿಯ ಜಾರ್ಖಂಡ್ ಉಪನಾಯಕ ಸೂರಜ್ ಮಂಡಲ್ ಗುಂಡೇಟಿನಿಂದ ಗಾಯ ಗೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಇಬ್ಬರು ಮಾಜಿ ಕಾಂಗ್ರೆಸ್ ಶಾಸಕರು, ಇಬ್ಬರು ಸ್ಥಳೀಯ ಪತ್ರಕರ್ತರ ಎದುರೇ

(ಕೊನೆಯ ಪುಟಕ್ಕೆ)

ರಿಲಯನ್ಸ್ ವಿರುದ್ಧ ಕೇಸು ದಾಖಲು

ಹೊಸದಿಲ್ಲಿ, ಆ. 8- 1.17 ಕೋಟಿ ಅಬಕಾರಿ ಸುಂಕವನ್ನು ವಂಚಿಸಿದ ರಿಲಯನ್ಸ್ ವಿರುದ್ಧ ಅಹ್ಮದಾಬಾದ್‌ನ ಅಡಿಷನಲ್ ಚೀಫ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್‌ರ ನ್ಯಾಯಾಲಯದಲ್ಲಿ ಕೇಂದ್ರೀಯ ಅಬಕಾರಿ ಅಧಿಕಾರಿಗಳು ಮೊಕದ್ದಮೆಯನ್ನು ದಾಖಲು ಮಾಡಿದ್ದಾರೆ.

ಆಗಸ್ಟ್ 21ರಂದು ಕೋರ್ಟ್ ಮುಂದೆ ಹಾಜರಾಗಬೇಕೆಂದು ರಿಲಯನ್ಸ್‌ನ ಕೆಲವು ಉನ್ನತ ಅಧಿಕಾರಿಗಳಿಗೆ ನ್ಯಾಯಾಲಯ ಸಮನ್ಸ್ ಹೊರಡಿಸಿದೆ.

ಆಡಳಿತ ನಿರ್ದೇಶಕ ಧೀರೂಭಾಯಿ ಅಂಬಾನಿ, ಕಾರ್ಯ ನಿರ್ವಾಹಕ ನಿರ್ದೇಶಕ ಎನ್. ಎಚ್. ಅಂಬಾನಿ, ಜನರಲ್ ಮ್ಯಾನೇಜರ್ ಟಿ. ವಿ. ಪೈ ಮುಂತಾದವರಿಗೂ ಸಮನ್ಸ್ ನೀಡಲಾಗಿದೆ.

ರೇಷ್ಮೆ ಕಾಂಟ್ರಾಕ್ಟ್ : ನಾಗೇಗೌಡ ಆರೋಪ

ಬೆಂಗಳೂರು, ಆ. 8- ವಿಶ್ವಬ್ಯಾಂಕ್ ನೆರವಿನ ಯೋಜನೆಯನ್ವಯ ರಾಜ್ಯ ಸರ್ಕಾರ, ರೇಷ್ಮೆ ಗೂಡು ಮತ್ತು ಮೊಟ್ಟೆಗಳನ್ನು ಸಂರಕ್ಷಿಸುವ 13 ಶೈತ್ಯೀಕರಣ ಘಟಕಗಳನ್ನು ನಿರ್ಮಿಸಲು, ಜಪಾನ್ ಸಂಸ್ಥೆಯೊಂದಕ್ಕೆ 14 ಕೋಟಿ ರೂ.ಗಳ ಕಂಟ್ರಾಕ್ಟ್ ನೀಡಿರುವ ಬಗ್ಗೆ ಶಾಸಕರ ಸಮಿತಿಯಿಂದ ತನಿಖೆ ನಡೆಸಬೇಕೆಂದು ವಿಧಾನ ಸಭೆಯ ಕಾಂಗ್ರೆಸ್ ಸಚೇತಕ ಕೆ. ಎನ್. ನಾಗೇಗೌಡ ಇಂದಿಲ್ಲಿ ಒತ್ತಾಯಿಸಿದ್ದಾರೆ.

'ಒಂದು ಬಹುರಾಷ್ಟ್ರೀಯ ಸಂಸ್ಥೆ, ಮತ್ತೆರಡು ತನ್ನ ಸಮಿತಿಗಳು ಜಪಾನ್ ಸಂಸ್ಥೆಯನ್ನೇ ಶಿಫಾರಸು ಮಾಡಿದ್ದವು. ಸರ್ಕಾರ ಕಿಂಗಿಯನ್ ಕಂಪೆನಿಗೆ ಅದಕ್ಕೆ ಒಲವು ತೋರಿತ್ತು. ಆದರೆ ವಿಶ್ವ ಬ್ಯಾಂಕ್ ನೆರವು ನಿಲ್ಲಿಸುವ ಬೆದರಿಕೆಯೊಡ್ಡಿದ ನಂತರ ಜಪಾನ್ ಕಂಪೆನಿಗೆ ಅನಿವಾರ್ಯವಾಗಿ ಮೊರೆ ಹೋಗಿದೆ' ಎಂದು ನಾಗೇಗೌಡ ಹೇಳಿದರು.

ಶೈತ್ಯೀಕರಣ ಘಟಕದ ನಿರ್ಮಾಣದಲ್ಲಿನ ಒಂದು ವರ್ಷದ ವಿಳಂಬದಿಂದಾಗಿ ರೇಷ್ಮೆ ಕೃಷಿಕರು ರೇಷ್ಮೆ ಸಂರಕ್ಷಣಾ ದಾಸ್ತಾನು ಸೌಲಭ್ಯದಿಂದ ವಂಚಿತರಾಗಿದ್ದು 4 ಕೋ. ರೂ. ಗಳ ನಷ್ಟಕ್ಕೊಳಗಾಗಿದ್ದಾರೆ' ಎಂದು ಅವರು ಆಪಾದಿಸಿದ್ದಾರೆ.

ಅದಕ್ಕಿತೆ, ಅವ್ಯವಹಾರ, ಗೊಂದಲಗಳಿಂದ ಜನತಾ ಪಕ್ಷ ಅಧಿಕಾರ ರೂಢವಾದ ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯ ರೇಷ್ಮೆ ಕೃಗಾರಿಕೆ 3.38 ಕೋ. ರೂ. ಗಳ ನಷ್ಟ ಅನುಭವಿಸುತ್ತಿದೆ. ರೇಷ್ಮೆ ಕೃಷಿಗೆ ಬೆಲೆ ಏರು ಮತ್ತು ಸಾಲು ತೆಗೆಯುವವರಿಗೆ ಸಮಾಜ ಧನ ಸೌಲಭ್ಯ, ದೊಂಬಿಯಲ್ಲಿ, ರೇಷ್ಮೆ ಕೈಗಾರಿಕೆಯ ಸಮಸ್ಯೆಗಳನ್ನು ಅಧ್ಯಯನ ಮಾಡಲು ಶಾಸಕರ ಸಮಿತಿಯೊಂದನ್ನು ನೇಮಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಸೀಮಾ ಸಮಿತಿಯ 'ರಸ್ತೆ ತಡೆ'

ಪುಣೆ, ಆ. 8- ಕರ್ನಾಟಕ – ಮಹಾರಾಷ್ಟ್ರ ಗಡಿ ಸಮಸ್ಯೆಯನ್ನು ಶೀಘ್ರವೇ ಇತ್ಯರ್ಥಪಡಿಸಬೇಕೆಂದು ಒತ್ತಾಯಿಸಿ ಸಂಯುಕ್ತ ಮಹಾರಾಷ್ಟ್ರ ಸೀಮಾ ಸಮಿತಿ (ಎಸ್. ಎಂ.ಎಸ್.ಎಸ್)ಯು ನೇತೃತ್ವದಲ್ಲಿ ಮುಂಬಯಿ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಇಂದು ಸತ್ಯಾಗ್ರಹ ನಡೆಸಿದ 300ಕ್ಕೂ ಹೆಚ್ಚು ಜನರನ್ನು ಬಂಧಿಸಲಾಯಿತು.

ಬೆಳಿಗ್ಗೆ ಹತ್ತು ಗಂಟೆಯಿಂದ ಆರಂಭವಾದ ಚಳವಳಿ ಎರಡು ಗಂಟೆ ಕಾಲ ನಡೆಯಿತು. ಪದ್ಮಾವತಿ ಚೌಕದಲ್ಲಿ ಎಸ್.ಎಂ.ಎಸ್.ಎಸ್. ನಾಯಕರು ಭಾಷಣ ಮಾಡಿದರು.

ಕೆಲವು ಶಿವಸೇನಾ ಕಾರ್ಯಕರ್ತರು ರಸ್ತೆಯಿಂದ ಇಷ್ಟು ದಕ್ಷಿಣಕ್ಕೆ ತೆರಳಿ ಕಲ್ಲು ಹಾಗೂ ಟೈರ್‌ಗಳನ್ನು ರಸ್ತೆಗೆ ಅಡ್ಡವಾಗಿಟ್ಟು ಸಂಚಾರವನ್ನು ಅಸ್ತವ್ಯಸ್ತಗೊಳಿಸಿದರು.

ಕರ್ನಾಟಕದ ಎಂ.ಇ.ಎಸ್.ನ ಇಬ್ಬರು ಶಾಸಕರಾದ ರಾಜಭಾವು ಮಾನೆ ಮತ್ತು ವಸಂತರಾವ್ ಪಾಟೀಲ್, ಮಹಾರಾಷ್ಟ್ರದ ಶಾಸಕರಾದ ರಾಂ ಕಸ್ತೆ, ಅಣ್ಣಾ ಜೋಷಿ (ಮರಾಠಿ) ಮತ್ತು ಜನತಾ ಶಾಸಕ ವಿಟ್ಠಲ ತುಪೆ ಮುಂತಾದವರು ಸತ್ಯಾಗ್ರಹದ ನೇತೃತ್ವ ವಹಿಸಿದ್ದರು.

ಶಾಸಕ ವಿ. ವೈ. ಪಾಟೀಲ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಾಬುರಾವ್ ಧರ್ಮಾಡೆ, ಶಿವಾಜಿ ವಿಶ್ವವಿದ್ಯಾನಿಲಯದ ಮಾಜಿ ಉಪಕುಲಪತಿ ಪಿ. ಕೆ. ಕರ್ಪಾರ್ಕರ್ ಬೆಳಗಾವಿ ಮೇಯರ್ ವಿ. ವೈ. ಚವಾಣ್ ಮುಂತಾದವರು ಕೊಲ್ಹಾಪುರದಲ್ಲಿ ನಡೆದ ಚಳವಳಿಯಲ್ಲಿ ಭಾಗವಹಿಸಿದ್ದರು.

'ಬರ: ಕೇಂದ್ರ ಪಕ್ಷಪಾತ ಇಲ್ಲ'

ಹೈದರಾಬಾದ್, ಆ.8-ಬರಗಾಲ ಪರಿಸ್ಥಿತಿ ದೇಶಾದ್ಯಂತ ವ್ಯಾಪಕವಾಗಿ ಹಬ್ಬಿದೆ ಎಂದು ಪ್ರಧಾನಿ ರಾಜೀವ ಗಾಂಧಿ ವರ್ಣಿಸಿದ್ದಾರೆ. ಅದೃಷ್ಟವಶಾತ್ ಆಹಾರ ಪರಿಸ್ಥಿತಿ ಉತ್ತಮವಾಗಿದ್ದರೂ ನೀರು, ಮೇವು ಮತ್ತು ಉದ್ಯೋಗದ ಸಮಸ್ಯೆಗಳು ಇವೆ ಎಂದು ಹೇಳಿದ್ದಾರೆ.

ಬರ ಪರಿಸ್ಥಿತಿಯನ್ನು ವಿಮರ್ಶಿಸಲು ಉಪಸಮಿತಿಯೊಂದನ್ನು ರಚಿಸಲಾಗಿದ್ದು ಮುಂದಿನ ಸೋಮವಾರ ಅದರ ಎರಡನೇ ಸಭೆ ನಡೆಯುತ್ತದೆ. ಸಮಿತಿ ಕೆಲವು ನಿರ್ದಿಷ್ಟ ಸಮಸ್ಯೆಗಳನ್ನು ಗುರುತಿಸಿದೆ ಎಂದು ರಾಜೀವ್ ಹೇಳಿದರು.

ಆಂಧ್ರಪ್ರದೇಶದ ಬರ ಪರಿಸ್ಥಿತಿ ಕುರಿತು ಕೇಂದ್ರ ಸರಕಾರ 'ಪಕ್ಷಪಾತ' ಧೋರಣೆ ತಳೆದ ಎಂಬ ತೆಲುಗುದೇಶಂನ ಆಪಾದನೆ 'ಸುಳ್ಳು' ಎಂದು ಅವರು ಸ್ಪಷ್ಟಪಡಿಸಿದರು.

'ಪಾರ್ಟೀ ಸವಾಲಿಗೆ ಅಧಿಕಾರ ಬೇಕು'

ಅಹಮದಾಬಾದ್, ಆ. 8- ಬೊಫೋರ್ಸ್ ಹಗರಣದ ತನಿಖೆಗಾಗಿ ರಚಿಸಲಿರುವ ಸಂಸದೀಯ ಸಮಿತಿಗೆ ಪ್ರಧಾನಿ ಸಹಿತ ಎಲ್ಲಾ ಸಚಿವರುಗಳನ್ನು ಪಾರ್ಟೀ ಸವಾಲಿಗೆ ಗುರಿಪಡಿಸುವ ಅಧಿಕಾರವನ್ನು ನೀಡಬೇಕು ಎಂದು ಭಾರತೀಯ ಜನತಾ ಪಕ್ಷದ ಅಧ್ಯಕ್ಷ ಎಲ್. ಕೆ. ಅಡ್ವಾಣಿ ಅವರು ಇಂದು ಒತ್ತಾಯಿಸಿದರು.

ಭಾರೀ ಲಂಚ ಪಾವತಿಯಾಗಿರುವ ಈ ಸಂಶಯಾಸ್ಪದ ವ್ಯವಹಾರದ ನಿಜ ಸಂಗತಿಗಳನ್ನು ಹೊರಗೆಡಹುವಲ್ಲಿ ಈ ಕ್ರಮ ಪ್ರಾಮುಖ್ಯವೆನಿಸುವುದು. ಅಂತಹ ಕ್ರಮವು ಪರಿಸ್ಥಿತಿಗಳನ್ನು ಒಪ್ಪಿಕೊಂಡರೆ ಮಾತ್ರ ವಿರೋಧ ಪಕ್ಷಗಳು ಅಂತಹ ತನಿಖಾ ಸಮಿತಿಯಲ್ಲಿ ಪಾಲ್ಗೊಳ್ಳುವವು ಎಂದು ಇಲ್ಲಿ ಸುದ್ದಿಗಾರರ ಜೊತೆ ಮಾತನಾಡುತ್ತಾ ಅವರು ಹೇಳಿದರು.

ಬೊಫೋರ್ಸ್ ಜೊತೆಗೆ ಭಾರತ ಸರಕಾರ ಮಾಡಿಕೊಂಡಿರುವ ಕಂಟ್ರಾಕ್ಟ್ ಒಪ್ಪಂದದ ಪೂರ್ಣ ಪಾಠವನ್ನು ಪ್ರಕಾಶಪಡಿಸಬೇಕೆಂದೂ ಅವರು ಒತ್ತಾಯಿಸಿದರು.

2000 ಕೋಟಿ ರೂ.ಗಳ ನೌಕೆ ಖರೀದಿ

ಕಲ್ಕತ್ತಾ, ಆ. 8 – ಮುಂದಿನ ಕೆಲವು ವರ್ಷಗಳಲ್ಲಿ ಕೇಂದ್ರ ಸರಕಾರವು ನೌಕಾ ಪಡೆಗಾಗಿ ಭಾರತೀಯ ಹಡಗುಕಟ್ಟೆಗಳಿಂದ 2,000 ಕೋಟಿ ರೂಪಾಯಿಗಳಿಗೂ ಅಧಿಕ ಮೌಲ್ಯದ ಹಡಗುಗಳನ್ನು ಖರೀದಿಸಲಿದೆ ಎಂದು ರಕ್ಷಣಾ ಸಚಿವ ಕೆ. ಸಿ. ಪಂತ್ ಇಂದಿಲ್ಲಿ ತಿಳಿಸಿದರು.

ಗೈಡೆಡ್ ಕ್ಷಿಪಣಿಯ ಗಾರ್ಡನ್ ರೀಚ್ ಶಿಪ್-ಬಿಲ್ಡರ್ಸ್ ಅಂಡ್ ಇಂಜಿನಿಯರ್ಸ್ ನಿರ್ಮಿಸಿದ ಹಡಗು ಕಸ್ಟಿಯಲ್ಲಿ ನೌಕಾ ಪಡೆಯ ಸಮೀಕ್ಷಾ ನೌಕೆ ಐ ಎನ್ ಎಸ್ "ಸಟ್ಲೆಜ್"ನ್ನು ಪಡೆಗೆ ಸೇರಿಸಿದ ಸಮಾರಂಭದಲ್ಲಿ ಅವರು ಈ ವಿಚಾರವನ್ನು ತಿಳಿಸಿದರು. ಸರಕಾರವು ಟ್ರಾಲರ್ ಹಡಗು ತಯಾರಿಕಾ ಕಾರ್ಯಕ್ರಮವನ್ನು ಹಾಕಿಕೊಂಡಿದೆ ಎಂದು ಅವರು ತಿಳಿಸಿದರು.

ದರ್ಶನ್‌ಸಿಂಗ್ ಅಜ್ಞಾತವಾಸ

ಅಮೃತಸರ, ಆ. 8- 'ಉಗ್ರಗಾಮಿಗಳಿಗೆ ಸಿಖ್ ವ್ಯವಹಾರಗಳನ್ನು ಮುನ್ನಡೆಸಲು ದಾರಿ ಮಾಡಿಕೊಡುವುದಕ್ಕಾಗಿ' ಸಿಖ್ ರಂಗದಿಂದಲೇ ತಾವು ಹಿಂದೆ ಸರಿಯುವ ಅಚ್ಚರಿಯ ಕ್ರಮವೊಂದನ್ನು ಅಕಾಲ್‌ತಖ್ತ್‌ನ ಹಂಗಾಮಿ ಮುಖ್ಯ ಅರ್ಚಕ ಪ್ರೊ. ದರ್ಶನ್‌ಸಿಂಗ್ ಇಂದಿಲ್ಲಿ ಪ್ರಕಟಿಸಿದರು.

ತಾವು ಹುದ್ದೆಯನ್ನು ತ್ಯಜಿಸುತ್ತಿಲ್ಲ ಎಂದು ಸ್ಪಷ್ಟಪಡಿಸಿದ ಅವರು, 'ಇದನ್ನು ಒಂದು ಹಿಂದೆ ಸರಿಯುವಿಕೆ ಅಥವಾ ದೀರ್ಘ ಕಾಲದ ರಜೆ ಎಂದು ಪರಿಗಣಿಸಬಹುದು' ಎಂದು ಹೇಳಿದರು.

ಕೆಲ ಸಮಯದವರೆಗೆ ಎಲ್ಲ ಆಕಾಲಿ ಚಟುವಟಿಕೆಗಳಿಂದ ಹೊರಗಿರಲು ತಾವು ಬಯಸುತ್ತಿರುವುದಾಗಿ ದರ್ಶನ್‌ಸಿಂಗ್ ಹೇಳಿದರು.

ಪ್ರಕಟಣೆಯ ನಂತರ ಮುಖ್ಯ ಅರ್ಚಕರು ಚಂಡೀಗಢ ಬಳಿಯ ತಮ್ಮ ಹುಟ್ಟೂರು ಜಿರಕ್‌ಪುರ್‌ಗೆ ತಮ್ಮ ಕುಟುಂಬ ಸದಸ್ಯರ ಜತೆಗೆ ತೆರಳಿದರು.

ಎಷ್ಟು ಸಮಯದವರೆಗೆ ಅಮೃತಸರದಿಂದ ದೂರ ಉಳಿಯುವಿರಿ ಎಂಬ ಪ್ರಶ್ನೆಗೆ ದರ್ಶನ್‌ಸಿಂಗ್ 'ನನಗೆ ಗೊತ್ತಿಲ್ಲ' ಎಂದು ಉತ್ತರಿಸಿದರು.

ಸಿಖ್ ಸಮಸ್ಯೆಗಳ ಬಗ್ಗೆ ತಳೆಯಬೇಕಾದ ಧೋರಣೆಗಳಿಗೆ ಸಂಬಂಧಿಸಿದಂತೆ ದರ್ಶನ್‌ಸಿಂಗ್ ಮತ್ತು ಉಗ್ರಗಾಮಿಗಳ ನಡುವೆ ಉದ್ಭವಿಸಿದ ಬಿಕ್ಕಟ್ಟು, ಉಗ್ರಗಾಮಿ ಸಂಘಟನೆಗಳು ಮುಖ್ಯವಾಗಿ ಪಂಥೀಯ ಸಮಿತಿ ಮುಖ್ಯ ಅರ್ಚಕರನ್ನು ಉಗ್ರವಾಗಿ ಟೀಕಿಸುವುದರೊಂದಿಗೆ ಈಚೆಗೆ ಬಹಿರಂಗಕ್ಕೆ ಬಂದಿತ್ತು.

ಈ ಕ್ರಮ ಉಗ್ರಗಾಮಿಗಳಿಗೆ ಶರಣಾಗಿರುವುದನ್ನು ಸೂಚಿಸುತ್ತದೆ ಎಂಬ ವಾದಗಳನ್ನು ಪಿಟಿಐ ಜತೆಗೆ ಮಾತನಾಡುತ್ತಾ ಮುಖ್ಯ ಅರ್ಚಕರು ನಿರಾಕರಿಸಿದರು. 'ವಾಸ್ತವಿಕವಾಗಿ, ಸಿಖ್ ಹಿತಾಸಕ್ತಿಗಳಿಗೆ ಆಗುವ ಹಾನಿಯಲ್ಲಿ ಭಾಗೀದಾರನಾಗಲು ನಾನು ಇಚ್ಛಿಸುವುದಿಲ್ಲ' ಎಂದು ಅವರು ನುಡಿದರು. ಈ ವಿಚಾರವನ್ನು ವಿವರಿಸಿ ಹೇಳಲು ಅವರು ನಿರಾಕರಿಸಿದರು.

ಈ ಬಗ್ಗೆ ಇತರ ಮುಖ್ಯ ಅರ್ಚಕರ ಜತೆ ಸಮಾಲೋಚಿಸಿರುವಿರಾ ಎಂಬ ಪ್ರಶ್ನೆಗೆ ದರ್ಶನ್‌ಸಿಂಗ್ 'ಇದು ನನ್ನ ಸ್ವಂತ ನಿರ್ಧಾರ' ಎಂದರು.

(ಕೊನೆಯ ಪುಟಕ್ಕೆ)

ಬೊಫೋರ್ಸ್: ಸಿಂಗ್ ಪಾಲೂ ಇದೆ-ಪಂತ್

ಕಲ್ಕತ್ತಾ, ಆ. 8-ಬೊಫೋರ್ಸ್ ವ್ಯವಹಾರದಲ್ಲಿ ಎ.ಪಿ. ಸಿಂಗ್ ಅವರ ಪಾಲೂ ಇದೆ' ಎಂದು ರಕ್ಷಣಾ ಸಚಿವ ಕೆ.ಸಿ.ಪಂತ್ ಇಂದಿಲ್ಲಿ ನೆನಪಿಸಿದರು.

'ಸಿಂಗ್ ಜತೆ ಸಾರ್ವಜನಿಕವಾಗಿ ವಿವಾದದಲ್ಲಿ ಒಳಗೊಳ್ಳಲು ನನಗೆ ಇಷ್ಟವಿಲ್ಲ' ಎಂದಿರುವ ಪಂತ್, "ನಾವು ವಿವಿಧ ಖಾತೆಗಳಲ್ಲಿದ್ದು ಸಹೋದ್ಯೋಗಿಗಳಾಗಿದ್ದೆವು. ಜಂಟಿ ಜವಾಬ್ದಾರಿಯ ನೀತಿಯನ್ನು ನಾವು ಹೊಂದಿರಬೇಕು" ಎಂದು ಹೇಳಿದರು.

ಬೊಫೋರ್ಸ್ ಹಗರಣದಲ್ಲಿ ಪ್ರಧಾನಿ ರಾಜೀವ ಗಾಂಧಿಯವರ 'ಸ್ಥಿತಿ ಜವಾಬ್ದಾರಿಯೂ ಇದೆ' ಎಂದು ವಿ.ಪಿ. ಸಿಂಗ್ ಹೇಳಿರುವುದಕ್ಕೆ ಅವರು ಪ್ರತಿಕ್ರಿಯೆ ನೀಡಿದರು.

'ಬೊಫೋರ್ಸ್ ವ್ಯವಹಾರದ ಕುರಿತು ಅಡಗಿಸುವಂಥದ್ದೇನೂ ಇಲ್ಲ. ಜಂಟಿ ಸಮಿತಿಯ ಕೆಲಸಗಳ ಕುರಿತು ತಪ್ಪು ಪರಿಕಲ್ಪನೆಯನ್ನು ಹಾಕಲು ಸರಕಾರಕ್ಕೆ ಇಷ್ಟವಿಲ್ಲ' ಎಂದೂ ಪಂತ್ ಹೇಳಿದರು.

ಬೊಫೋರ್ಸ್ ಹಗರಣದ ತನಿಖೆ ಕುರಿತು ಪ್ರತಿಪಕ್ಷಗಳೊಂದಿಗೆ ಮೂರು ದಿನ ಚರ್ಚಿಸಿದ್ದು, ಸಮಿತಿಯ ಕುರಿತು ಅವು ನೀಡಿದ ಎಲ್ಲಾ ಮೂಲಭೂತ ಸಲಹೆಗಳನ್ನು ಸರಕಾರ ಸ್ವೀಕರಿಸಿದೆ ಎಂದು ಸ್ಪಷ್ಟಪಡಿಸಿದರು.

ಉಪ ಸಮಿತಿಗಳು ವಿದೇಶಕ್ಕೆ ಹೋಗುವುದು, ಹೋಗಗಿನವರನ್ನು ಸೇರಿಸಿಕೊಳ್ಳುವುದು ಮುಂತಾದ ವಿಷಯಗಳ ಪೂರ್ಣ ವಿವರಣೆಯನ್ನು ಆರಂಭಿಸಬಾರದೆಂದು ಹೇಳಿದರು. ಭಾರತ ಸರಕಾರಕ್ಕೆ ಸಹಾಯ ಮಾಡಿದ ಸ್ವೀಡನ್ ಸರಕಾರವನ್ನು ಪಂತ್ ಅಭಿನಂದಿಸಿದರು.

ರಾಜ್ಯಸಭೆಗೆ ಬಿಜೆಪಿ ಹಾಜರು

ಇಂದೋರ್, ಆ. 8 – ಬೊಫೋರ್ಸ್ ವಿಷಯ ಚರ್ಚೆಗೆ ಬರಲಿರುವುದರಿಂದ ಭಾರತೀಯ ಜನತಾ ಪಕ್ಷದ ಸದಸ್ಯರು ಬಹಿಷ್ಕಾರ ಹಿಂತೆಗೆದುಕೊಂಡು ಸೋಮವಾರ ರಾಜ್ಯಸಭೆಗೆ ಹಾಜರಾಗುವರೆಂದು ಅಟಲ್ ಬಿಹಾರಿ ವಾಜಪೇಯಿ ತಿಳಿಸಿದ್ದಾರೆ.

ಪತ್ರಕರ್ತರ ಜತೆ ಮಾತನಾಡಿದ ಅವರು, ಸರಕಾರ ಚರ್ಚೆಗೆ ಒಪ್ಪಿರುವುದರಿಂದ ಈ ನಿರ್ಧಾರ ಕೈಗೊಂಡಿದ್ದೇವೆ ಎಂದರು. ಬೊಫೋರ್ಸ್, ಫೇರ್‌ಫಾಕ್ಸ್ ಮತ್ತು ಸಬ್‌ಮರಿನ್ ಹಗರಣಗಳಿಂದಾಗಿ ಕಾಂಗ್ರೆಸ್ ಸರಕಾರ ಜನರ ವಿಶ್ವಾಸ ಕಳೆದುಕೊಂಡಿದೆ' ಎಂದರು.

● ಹೊಸದಿಲ್ಲಿ, ಆ. 8– ಗಡಿನಾಡಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನ್‌ಅವರು ಈಗ ಅರೆಪ್ರಜ್ಞೆಯಲ್ಲಿದ್ದು ಅವರ ದೇಹಸ್ಥಿತಿ ಸುಧಾರಿಸುತ್ತಿದೆ ಎಂದು ಅಖಿಲ ಭಾರತ ವೈದ್ಯ ವಿಜ್ಞಾನ ಸಂಸ್ಥೆಯ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ| ಎ.ಎನ್. ಸಫಾಯ ತಿಳಿಸಿದ್ದಾರೆ.

ಬೊಫೋರ್ಸ್: ಹೈದ್ರಾಬಾದಲ್ಲಿ ರಾಜೀವ್ ಸವಾಲು

ವಿದೇಶದಲ್ಲಿ ಪ್ರತಿಪಕ್ಷ ತನಿಖೆ ನಡೆಸಲಿ

ಹೈದರಾಬಾದ್, ಆ. 8- 'ಬೊಫೋರ್ಸ್ ವ್ಯವಹಾರದಲ್ಲಿ ಲಂಚ ಪಾವತಿಯಾಗಿದೆಯೆಂಬ ಆಪಾದನೆ ಬಗ್ಗೆ ನೀವು ವಿದೇಶಗಳಿಗೆ ಹೋಗಿ ತನಿಖೆನಡೆಸುತ್ತೀರಾದರೆ ನಮ್ಮದೇನೂ ಆಕ್ಷೇಪವಿಲ್ಲ' ಎಂದು ಪ್ರಧಾನಿ ರಾಜೀವ್‌ಗಾಂಧಿ ಅವರು ಪ್ರತಿಪಕ್ಷೀಯರಿಗೆ ಇಂದು ಸವಾಲು ಹಾಕಿದ್ದಾರೆ.

'ಪ್ರತಿಪಕ್ಷಗಳ ಈ ಕಾರ್ಯದಲ್ಲಿ ನಾವು ಎಂದೂ ಅಡ್ಡಿ ಬರುವುದಿಲ್ಲ' ಎಂದು ಆಂಧ್ರ ಪ್ರದೇಶಕ್ಕೆ ಒಂದು ದಿನದ ಭೇಟಿಗಾಗಿ ಇಲ್ಲಿಗಾಗಮಿಸಿದ ರಾಜೀವ ಗಾಂಧಿ ಸುದ್ದಿಗಾರರೊಂದಿಗೆ ಮಾತನಾಡುತ್ತ ತಿಳಿಸಿದರು.

ಬೊಫೋರ್ಸ್ ಮತ್ತಿತರ ರಕ್ಷಣಾ ವ್ಯವಹಾರಗಳ ಕುರಿತು ವಾಸ್ತವ ವಿಷಯಗಳನ್ನು ಅರಿಯಲು ಸ್ವೀಡನ್, ಸ್ವಿಜರ್‌ಲ್ಯಾಂಡ್ ಮತ್ತು ಪಶ್ಚಿಮ ಜರ್ಮನಿಗಳಿಗೆ ಪ್ರತಿಪಕ್ಷ ನಿಯೋಗ ಕಳಿಸಬೇಕೆಂದು ವಾದಿಸಿದ್ದ ಆಂಧ್ರ ಮುಖ್ಯಮಂತ್ರಿ ಎನ್. ಟಿ. ರಾಮರಾವ್ ಅವರೂ ಪ್ರಧಾನಿಯವರ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಬೊಫೋರ್ಸ್ ಪ್ರಕರಣದ ಕುರಿತ ಸಂಸದೀಯ ಸಮಿತಿಯನ್ನು ಬಹಿಷ್ಕರಿಸುವ ಪ್ರತಿ ಪಕ್ಷಗಳ ನಿರ್ಧಾರ 'ದುರದೃಷ್ಟಕರ' ಎಂದು ಹೇಳಿದ ರಾಜೀವ ಗಾಂಧಿ, 'ಪ್ರತಿಪಕ್ಷಗಳ ಪ್ರತಿಯೊಂದು ಪ್ರಸ್ತಾಪವನ್ನೂ ನಾವು ಒಪ್ಪಿದ್ದೇವೆ' ಎಂದು ತಿಳಿಸಿದರು. 'ಪ್ರತಿಪಕ್ಷಗಳು ಸತ್ಯವನ್ನು ತಿಳಿಯುವ ಬಗ್ಗೆ ಗಂಭೀರವಾಗಿಲ್ಲ ಎಂಬುದು ಸ್ಪಷ್ಟವಾಗಿದೆ' ಎಂದು ರಾಜೀವ್ ಟೀಕಿಸಿದರು.

ವಿಷಯವನ್ನು ರಾಜ್ಯಸಭೆಯಲ್ಲಿ ಚರ್ಚೆಗೆತ್ತಿಕೊಳ್ಳಲಾಗುವುದು. ಆದ್ದರಿಂದ ಪ್ರತಿಪಕ್ಷಗಳಿಗೆ ಇನ್ನೂ ಸಮಯಾವಕಾಶವಿದೆ ಎಂದು ಅವರು ಹೇಳಿದರು.

ಸಂಸದೀಯ ಸಮಿತಿಯ ಅಧ್ಯಕ್ಷರ ನೇಮಕದ ವಿಚಾರದಲ್ಲಿ ಪ್ರತಿಪಕ್ಷಗಳು ಸಮ್ಮತಿ ನೀಡಲಿಲ್ಲವೇ ಎಂದು ಕೇಳಿದಾಗ, 'ಅದು ಸಮಸ್ಯೆಯಲ್ಲ' ಎಂದು ರಾಜೀವ್ ಉತ್ತರಿಸಿದರು.

ತೆಲುಗು ಗಂಗಾಯೋಜನೆ ಜಾರಿಯಲ್ಲಿ ವಿಳಂಬ, ಬರಪರಿಹಾರ ಸಹಾಯದಲ್ಲಿ ಪಕ್ಷಪಾತ, ಪಾಕಿಸ್ತಾನದೊಡನೆ ಮೈತ್ರಿ ಒಪ್ಪಂದ ಮತ್ತು ವಿವಾದಾಸ್ಪದ ರಾಮಜನ್ಮಭೂಮಿ ಮುಂತಾದ ಅನೇಕ ಪ್ರಶ್ನೆಗಳಿಗೆ ರಾಜೀವ್ ಉತ್ತರ ನೀಡಿದರು.

ಇದಕ್ಕೆ ಮೊದಲು, ಪ್ರಧಾನಿ ರಾಜೀವ ಗಾಂಧಿ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗ ರಾಜ್ಯಪಾಲ ಕುಮುದ್‌ಬೆನ್ ಜೋಷಿ, ಮುಖ್ಯಮಂತ್ರಿ ಎನ್. ಟಿ. ರಾಮರಾವ್, ಮಾಜಿ ಮುಖ್ಯಮಂತ್ರಿಗಳಾದ ಕೆ. ಬ್ರಹ್ಮಾನಂದ ರೆಡ್ಡಿ, ಎಂ. ಚೆನ್ನಾರೆಡ್ಡಿ, ಎನ್. ಭಾಸ್ಕರ ರಾವ್, ಕೇಂದ್ರದ ಕೈಗಾರಿಕಾ ಸಚಿವ ಜೆ. ವೆಂಗಲರಾವ್ ಮುಂತಾದವರು ಹಾಜರಿದ್ದು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಮುಂಬೈಗೆ

ಹತ್ತು ಗಂಟೆಗಳ ಭೇಟಿಯ ನಂತರ ಇಂದು ರಾತ್ರಿ ಪ್ರಧಾನಿ ರಾಜೀವ್‌ಗಾಂಧಿ ಮುಂಬಯಿಗೆ ತೆರಳಿದರು. ಹೈದರಾಬಾದಿನಲ್ಲಿ ಸರ್ದಾರ್ ಪಟೇಲ್ ಪೊಲೀಸ್ ಅಕಾಡೆಮಿಯಲ್ಲಿ ಐ.ಪಿ.ಎಸ್. ಪ್ರೊಬೇಷನರ್‌ಗಳು ಹಾಗೂ ಸಿಕಂದರಾಬಾದ್‌ನಲ್ಲಿ ನಡೆದ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದ್ದಲ್ಲದೆ ಗುಂಟೂರ್‌ನಲ್ಲಿ ನೀರ್‌ಕೊಂಡ ಗ್ರಾಮದ ಹರಿಜನರನ್ನು ಪ್ರಧಾನಿ ಭೇಟಿ ಮಾಡಿದರು.

ಮುಂಬಯಿಯಲ್ಲಿ ಪ್ರಧಾನಿ

ಮುಂಬಯಿ, ಆ. 8- ಶ್ರೀಲಂಕೆಯ ಜತೆಗೆ ಒಪ್ಪಂದಕ್ಕೆ ಸಹಿಹಾಕುವ ಮೂಲಕ ಅಲಿಪ್ತ ರಾಷ್ಟ್ರಗಳು ತಮ್ಮ ಸ್ವಾತಂತ್ರ್ಯ ಎಂದು ಭಾರತ ಜಗತ್ತಿಗೆತೋರಿಸಿಕೊಟ್ಟಿದೆ ಎಂದು ಪ್ರಧಾನಿ ರಾಜೀವ್ ಗಾಂಧಿ ಇಂದು ರಾತ್ರಿ ಇಲ್ಲಿ ಹೇಳಿದರು.

ಮುಂಬಯಿ ಪ್ರದೇಶ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ, ಹೈದರಾಬಾದ್ ನಿಂದ ಬಂದೊಡನೆಯೇ ಪಕ್ಷ ಕಾರ್ಯಕರ್ತರ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಈ ಒಪ್ಪಂದ ಅಲಿಪ್ತ ರಾಷ್ಟ್ರಗಳಲ್ಲಿ ತಮ್ಮ ಸಮಸ್ಯೆಗಳನ್ನು ಸ್ವತಃ ತಾವೇ ಪರಿಹರಿಸಿಕೊಳ್ಳುವುದೆಂಬ ಆತ್ಮವಿಶ್ವಾಸವನ್ನು ಮೂಡಿಸುತ್ತದೆ ಎಂದು ಪ್ರಧಾನಿ ಹೇಳಿದರು.

ಕೆಲವು ಪಕ್ಷಗಳು ಶ್ರೀಲಂಕೆಯನ್ನು ಪ್ರವೇಶಿಸಲು ಯುಕ್ತಿಸುತ್ತಿದ್ದುದರಿಂದ ಭಾರತ ಒಪ್ಪಂದಕ್ಕೆ ಸಹಿ ಹಾಕುವ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗಿತ್ತು ಎಂದು ನುಡಿದ ಅವರು, ಪಾಕಿಸ್ತಾನ, ಇಸ್ರೇಲ್ ಮತ್ತು ದಕ್ಷಿಣ ಆಫ್ರಿಕಾಗಳು ಲಂಕಾ ಅಧಿಕಾರಿಗಳ ನೆರವಿಗೆ ಮುಂದಾಗಿದ್ದವು ಎಂದರು.

ಈ ಪರಿಸ್ಥಿತಿ ಮುಂದುವರಿಯಲು ಇತರ ರಾಷ್ಟ್ರಗಳಿಗೆ ತೊಂದರೆಯೊದಗುತ್ತಿತ್ತು ಎಂದು ಅವರು ನುಡಿದರು.

ಕರಿಪತಾಕೆ

ಇಂದು ಇಲ್ಲಿನ ಸಭಾರಂಭವೊಂದಕ್ಕೆ ಆಗಮಿಸಿದ ಪ್ರಧಾನಿ ರಾಜೀವ್ ಗಾಂಧಿಯವರ ಮುಂದೆ ಪ್ರತಿಪಕ್ಷೀಯರು ಕಪ್ಪು ಬಾವುಟ ಪ್ರದರ್ಶನ ನಡೆಸಿದರು. ಪ್ರಧಾನಿ ವಿಮಾನ ನಿಲ್ದಾಣದಿಂದ ಹೋಗುವಾಗ ದಾರಿಯುದ್ದಕ್ಕೂ ಈ ಪ್ರದರ್ಶನ ನಡೆಯಿತು.

ಜನತಾ ನಾಯಕರಾದ ಜಾರ್ಜ್‌ಫೆರ್ನಾಂಡಿಸ್, ಮಧುದಂಡವತೆ, ಸಂಸತ್ಸದಸ್ಯ ದತ್ತಾ ಸಾಮಂತ್ ಮುಂತಾದವರು ಪ್ರಧಾನಿ ವಿರುದ್ಧ ನಡೆಸಿದ ಪ್ರದರ್ಶನದ ನೇತೃತ್ವ ವಹಿಸಿದ್ದರು.

ಮತ್ತೆ ವೈದ್ಯರ ಚಳವಳಿ

ಹೊಸದಿಲ್ಲಿ, ಆ. 8– ತಮ್ಮ ಮೂಲಭೂತ ಬೇಡಿಕೆಗಳು ಪೂರ್ಣವಾಗಿ ಈಡೇರದೇ ಇರುವುದರಿಂದ ಮತ್ತೆ ವೈದ್ಯರ ರಾಷ್ಟ್ರವ್ಯಾಪಿ ಚಳವಳಿ ಆರಂಭಿಸಲು ಕೇಂದ್ರೀಯ ಆರೋಗ್ಯ ಸೇವಾ ಮತ್ತು ಇತರ ಸೇವಾ ಇಲಾಖೆಯ ವೈದ್ಯರ ಸಂಘಗಳ ಜಂಟಿ ಕ್ರಿಯಾ ಸಮಿತಿ ನಿರ್ಧರಿಸಿದೆ.

ಬಹಿಷ್ಕಾರದುರದೃಷ್ಟಕರ

ಹೈದರಾಬಾದ್, ಆ. 8–ಬೊಫೋರ್ಸ್ ವ್ಯವಹಾರ ಮತ್ತು ಸಂಬಂಧಪಟ್ಟ ಇತರ ವಿಚಾರಗಳ ತನಿಖೆ ನಡೆಸಲು ರಚಿಸಲು ಉದ್ದೇಶಿಸಲಾಗಿರುವ ಸಂಸದೀಯ ಸಮಿತಿಯನ್ನು ಬಹಿಷ್ಕರಿಸಲು ವಿರೋಧ ಪಕ್ಷಗಳು ನಿರ್ಧರಿಸಿರುವುದು ದುರದೃಷ್ಟಕರವೆಂದು ಪ್ರಧಾನಿ ರಾಜೀವ್ ಗಾಂಧಿ ಇಂದಿಲ್ಲಿ ಹೇಳಿದರು.

ವಾಸ್ತವವಾಗಿ ಏನು ನಡೆದಿದೆ ಎಂಬುದನ್ನು ಕಂಡುಕೊಳ್ಳುವ ಬಗ್ಗೆ ವಿರೋಧ ಪಕ್ಷಗಳು ಗಂಭೀರವಾಗಿ ಚಿಂತಿಸುತ್ತಿಲ್ಲವೆಂಬುದು ಅವು ಕೈಕೊಂಡಿರುವ ನಿರ್ಧಾರದಿಂದ ಗೊತ್ತಾಗುತ್ತದೆ ಎಂದು ಸುದ್ದಿಗಾರರ ಜತೆ ಮಾತನಾಡುತ್ತಾ ಅವರು ಹೇಳಿದರು.

ಇಂದಿನಿಂದ ಬಿಜೆಪಿಯ 'ಗದ್ದಿ ಛೋಡ್' ಚಳವಳಿ

ಇಂದೋರ್, ಆ. 8- ದೇಶದ 'ಭ್ರಷ್ಟ' ಕಾಂಗ್ರೆಸ್ ಸರಕಾರದ ಉಚ್ಚಾಟನೆಗಾಗಿ ಭಾರತೀಯ ಜನತಾ ಪಕ್ಷವು ನಾಳೆಯಿಂದ 'ಗದ್ದಿ ಛೋಡ್' (ಅಧಿಕಾರ ತ್ಯಜಿಸಿ) ಎನ್ನುವ ಹೊಸ ಚಳವಳಿಯನ್ನು ನಡೆಸಲಿದೆ.

ಪಕ್ಷದ ನಾಯಕ ಅಟಲ್ ಬಿಹಾರಿ ವಾಜಪೇಯಿ ಅವರು ಈ ವಿಷಯವನ್ನು ಬಹಿರಂಗಪಡಿಸಿದರು.

ಮಳೆ ಬೆಳೆ ಸಮೀಕ್ಷೆ - 1

ಮಳೆಯ ತವರಿನಲ್ಲಿ ಬರದ ನೆರಳು

ನಮ್ಮ ಸಂಪಾದಕೀಯ ಬಳಗದ ದಿನೇಶ್ ಅಮೀನ್ ಮಟ್ಟು ಮತ್ತು ಬಿ. ಟಿ. ರಂಜನ್ ಅವರು ಮಲೆನಾಡಿನಾದ್ಯಂತ ಪ್ರವಾಸ ಮಾಡಿ ಮಳೆ-ಬೆಳೆ ಸ್ಥಿತಿ ಬಗ್ಗೆ ನಡೆಸಿದ ವಿಶೇಷ ಸಮೀಕ್ಷೆಯನ್ನು ಇಂದಿನಿಂದ ನೀಡುತ್ತಿದ್ದೇವೆ.

—ಸಂ.

"ರೋಗಿಯ ಸ್ಥಿತಿ ಚಿಂತಾಜನಕವಾಗಿದ್ದು ಸಾವು-ಬದುಕಿನ ಹೋರಾಟ ನಡೆಯುತ್ತದೆ. ಬದುಕುವ ಆಶಾಕಿರಣ ಕ್ಷೀಣವಾಗಿದೆ. ಬದುಕುಳಿದರೂ ಹಸಿಗಪ್ಪೇ ಉಸಿರು: ಇದ್ದು ಸತ್ತಂತೆ"

ಮಳೆಯಿಲ್ಲದೆ ಬಿಸಿಲ ಬೇಗೆಯಲ್ಲಿ ನರಳುತ್ತಾ, ಬರದ ಹೊಸ್ತಿಲಲ್ಲಿರುವ ಮಲೆನಾಡ ರೈತರ ಬದುಕಿನ ದುಃಸ್ಥಿತಿಯ ವಿವರಣೆಗೆ ಇದಕ್ಕಿಂತ ಸಮರ್ಥ ಹೋಲಿಕೆ ಬೇರೊಂದಿರಲಾರದು.

"ಇಷ್ಟೊತ್ತಿಗೆ ನಾಲ್ಕು 'ನೆಗಸ' ಬರ್ಬೇಕಿತ್ತು. ಪೈರು ಕಪ್ಪಿಟ್ಟು ಕಂದ ಬೇಕಿತ್ತು. ಆದರೆ ಮಳೆಯಿಲ್ಲ. ನನ್ನ ಬುದ್ಧಿ ತಿಳಿದಂಗಿನಿಂದ ಇಂತಹ ಕಾಲ ಕಂಡಿಲ್ಲ. ಮೂರು ಬಾರಿ ಬೀಜ ನೆಟ್ಟೆ, ಎಲ್ಲ ಒಣಗೋಯ್ತು. ಈ ಬಾರಿ ಬ್ಯಾಂಕಿನ ಸಾಲ ತೀರ್ಸೋದು ಬಿಡಿ, ಹೊಟ್ಟೆ ತುಂಬ್ಕೊಳ್ಳೋದು ಹೇಗೆ? ಇನ್ ಮಳೆ ಬಂದ್ರೂ ದೀಪಕ್ಕೆ ಹಣ ಎಲ್ಲಿಂದ ತರಲಿ?" ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲೂಕಿನ ರೈತ ಗಣಪಯ್ಯನ ಈ ಪ್ರಶ್ನೆಗೆ ಉತ್ತರ ನೀಡುವವರು ಯಾರು?

"ಹಗಲು ಹೊತ್ತಿನಲ್ಲಿಯೇ ಲೈಟಿಲ್ಲದೆ ವಾಹನ ಓಡ್ಸೋಕೆ ಆಗ್ತಾ ಇರಲಿಲ್ಲ. ಆ ರೀತಿ ಮಳೆ ಮಂಜು ಮುಸುಕಿರ್ತಿತ್ತು. ಬಾಟಿಯಲ್ಲಿ ಹೊತ್ತಿಸ್ದಂಗೆ ಮಳೆ. ಕಪಸ್ಸು ವನಾದಿದರೂ ಮೂರು ತಿಂಗಳಲ್ಲಿ ಸೂರ್ಯ

ದಿನೇಶ್ ಅಮೀನ್ ಮಟ್ಟು

ಕಾಣ್ತಿರಲಿಲ್ಲ. ಆ ಕಾಲ ಕಳೆದೋಯ್ತು ಬಿಡಿ." ಆಗುಂಬೆಯ ಮಲ್ಲಂದೂರಿನ ಎಂ. ಜಿ. ಶ್ರೀನಿವಾಸ್ ಮಳೆಯ ಗತವೈಭವವನ್ನು ಮೆಲುಕು ಹಾಕುತ್ತಿದ್ದರು.

"ಮಳೆ ನಮಗೆ ಬಾಲವತ್ತೂ ಅವ ರೂಪ ಬಿಡಿ. ಈ ಬಾರಿ ಚಿಕ್ಕಮಗಳೂರು ಪೇಟೆಯಲ್ಲಿಯೇ ಕುಡಿಯೋಕೆ ನೀರಿಲ್ಲ ಮಾಡೆ ನಮ್ಮೇನು ಮಾಡಾ! ಇದ್ದ ಮೂರು ಎಕರೆ ಜಮೀನು ಖಾಲಿ ಬಿದ್ದಿದೆ. ಒಮ್ಮೆ ಬಿತ್ತಿದ ರಾಗಿ ಮಣ್ಣಾಗಿದೆ. ಇಷ್ಟರೊಳ್ಗೆ ರಾಗಿಗೆ ತಿಂಗಳಾಗ್ಬೇಕಿತ್ತು. ನೀವೇ ನೋಡಿ ಸಾರ್ ಗದ್ದೆನಾ? ಕಡೂರು ಮಲ್ಲೇನ್ವರದ ದೋಷವನ್ನು ಪಾಲುಗದ್ದೆಯನ್ನು ತೋರಿಸುತ್ತಾ ನಿಡುಸುಯ್ದು ಬಿಟ್ಟ.

"ಕೆಟ್ಟುಗದ್ದೆ ಇನ್ನೂ ಹದೀಬಿದೆ ನೇಜಿಗೆ ಎರಡು ಗಂಟು ಆಗಿದೆ. ಇನ್ನು ಅದನ್ನು ಗೊಬ್ಬರ ಮಾಡ್ಬೇಕಷ್ಟೆ. ನಾಟಿ ಮಾಡಿದ್ದು ಕೂಡಾ ಹಟ್ಟು ಹಾಗೇ ಇದೆ. ಸಮುದ್ರಕ್ಕೆ ಈಗಾಗಲೇ ಎರಡು ನೆರೆ ಬಂದು ಗದ್ದೆಯಲ್ಲಿ ಹಿಂದಿನ ಕೆಸರು ನಿಲ್ಬೇಕಿತ್ತು, ಅಟೆ ತಿಂಗಳಲ್ಲಿ ನದಿನೀರು ಉಪ್ಪಾಗಿದ್ದು ಎಲ್ಲಾದ್ರೂ ಉಂಟೆ



ಕರೆಗೆ ಕೈಹೊತ್ತಿರುವ ತಿಮ್ಮೇಗೌಡ

ಮಾರಾಯ್ರೆ? ಮೂಲ್ಕಿಯ ಅಶಿಕಾರಿ ಬೆಟ್ಟನ 70 ರ ಹರೆಯ ಕೋಟಿ ಪೂಜಾರಿ ಕೇಳುತ್ತಿದ್ದಾರೆ.

ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ ಚಿಕ್ಕಮಗಳೂರು... ಕರಾವಳಿ ಮತ್ತು ಮಲೆನಾಡಿನ ಯಾವ ಮೂಲೆಗೆ ಹೋದರೂ ಕೇಳುವುದೊಂದೇ ಗೋಳು– "ಮಳೆ ಇಲ್ಲ". ಕಾಣುವುದೊಂದೇ ದೃಶ್ಯ– ಸುಡುವ ಬಿಸಿಲು, ಬಿರಿದ ಪಾಳು ನೆಲ, ಒಣಗಿದ ಪೈರು, ತೋಳೆಬಿಟ್ಟಂತೆ ಹೊಳೆಯುವ ನೀಲಿಬಾನು ಇವೆಲ್ಲವನ್ನೂ ಭೀತಿ ಮಡುಗಟ್ಟಿದ ಕಣ್ಣುಗಳಲ್ಲಿ ಮೂಕನಾಗಿ ವೀಕ್ಷಿಸುತ್ತ ಕೊರಗುತ್ತಿರುವ ರೈತರು.

ಮಳೆ ತನ್ನ ತವರಿನಲ್ಲಿಯೇ ಯಾವತ್ತೂ ಇಷ್ಟು ನಿರ್ದಯಿಯಾಗಿರಲಿಲ್ಲ. ಯಾವ ಮೂಲೆಗೂ ಬರಬಡಿದರೂ ಮಲೆನಾಡು ಮಾತ್ರ ಮಳೆಯಲ್ಲಿ ಮುಳುಗಿರುತ್ತಿತ್ತು. ಈ ತಲೆದಂಡಿಗೆ ಜನ ಕಲ್ಪಿಸಲಾಗದ ಅನಾವೃಷ್ಟಿಗೆ ಮಲೆನಾಡು ಈ ವರ್ಷ ಬಲಿಯಾಗಿದೆ.

"ರಾಜ್ಯದ ಭತ್ತದ ಕಣಜ", ಎಂಬ ಮುಂದಾಸನ್ನು ಹೊತ್ತುಕೊಂಡು ಈ ವರೆಗೆ ಮೆರೆದಾಡುತ್ತಿದ್ದ ಮಲೆನಾಡು ಈ ಬಾರಿ ಅನಿವಾರ್ಯವಾಗಿ ಮುಂಡಾಸು ಕಳೆದುಕೊಳ್ಳಬೇಕಾದ ದಯನೀಯ ಸ್ಥಿತಿ. ರಾಜ್ಯಕ್ಕೆಲ್ಲ ಅನ್ನದಾತ ಎಂಬ ದವಿಸಿನಿಂದ ಬೀಗುತ್ತಿದ್ದ ಮಲೆನಾಡ ರೈತನೇ ಉಪವಾಸದಿಂದ ನರಳಬೇಕಾದ ವೈರುಧ್ಯ.

(ಎರಡನೆ ಪುಟಕ್ಕೆ)

ತುಂತುರು



ಕರ್ನಾಟಕ ಸರಕಾರ

ಮುಖ್ಯ ಗ್ರಂಥಾಲಯಾಧಿಕಾರಿಗಳು,
ಜಿಲ್ಲಾ ಕೇಂದ್ರ ಗ್ರಂಥಾಲಯ,
ಕಾರವಾರ, ಉತ್ತರ ಕನ್ನಡ.
ಕ್ರ.ಸಂ.ಜಾ.ಪ್ರ.ಸಂಖ್ಯೆ:87-88,
ದಿ. 27-7-87

ಹಳೇ ಪುಸ್ತಕಗಳಿಗೆ ಬೈಂಡಿಂಗ್‌ಗಾಗಿ ಟೆಂಡರು

ಜಿಲ್ಲಾ ಕೇಂದ್ರ ಗ್ರಂಥಾಲಯ, ಕಾರವಾರ ಹಾಗೂ ಅದರ ಶಾಖೆಗಳ ಹಳೆ ಪುಸ್ತಕಗಳ ಬೈಂಡಿಂಗ್ ಕೆಲಸಕ್ಕಾಗಿ ಸ್ಥಳೀಯ ಹಾಗೂ ಗುತ್ತಿಗೆದಾರರಿಂದ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ 31-8-87ರ ಮಧ್ಯಾಹ್ನ 4 ಗಂಟೆಯ ವರೆಗೆ. ಇಎಂಡಿ ರೂ. 1,000.00. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.

ವಾಪ್ರಇ. 1684

ಕರ್ನಾಟಕ ಸರಕಾರ

ಪ್ರಧಾನ ಕೃಷಿ ಅಧಿಕಾರಿಗಳು,
ದಕ್ಷಿಣ ಕನ್ನಡ, ಮಂಗಳೂರು.

ನಂ.ಬಿ:ಎಮ್ವೈಜೆ:9 ಏಲೀವಾನಿ 29:86-87 ದಿ. 30 ಜುಲೈ 87

ಹಳೆಯ ಜೀಪಿನ ಹರಾಜು

ದಕ್ಷಿಣ ಕನ್ನಡ ಜಿಲ್ಲಾ ಪ್ರಧಾನ ಕೃಷಿ ಅಧಿಕಾರಿ ಕಛೇರಿಯ ಮೆಕ್ಯಾನಿಕಲ್ ಚಾಲಿತ ಒಂದು ಹಳೆಯದಾದ ವಿಲ್ಲೀಸ್ ಜೀಪು ಸಂಖ್ಯೆ ಎಂ ವೈ ಜೆ 9ನ್ನು ದಿನಾಂಕ 26-8-87ರಂದು ಪೂರ್ವಾಹ್ನ ಗಂಟೆ 11ಕ್ಕೆ ಸದರಿ ಕಛೇರಿ ಆವರಣದಲ್ಲಿ ಹರಾಜು ಮಾಡಲಾಗುವುದು. ಇಎಂಡಿ ರೂ. 500 ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದು.

ವಾಪ್ರಇ 1683

ಆಗಸ್ಟ್ ತಿಂಗಳ ಪಡಿತರ ಬಿಡುಗಡೆ

ಮಂಗಳೂರು, ಆ. 8–ಮಂಗಳೂರು ಪಡಿತರ ಪ್ರದೇಶದ ಕಾರ್ಡುದಾರರಿಗೆ 1987ನೇ ಆಗಸ್ಟ್ ತಿಂಗಳ ಪಡಿತರ ಸಾಮಗ್ರಿಗಳನ್ನು ಈ ಕೆಳಗಿನ ಪ್ರಮಾಣದಲ್ಲಿ ಬಿಡುಗಡೆ ಮಾಡಲಾಗಿದೆ.

ಅಕ್ಕಿ ಸಣ್ಣವರಿಗೆ ಮೂರು ಕಿ. ಜಿ, ದೊಡ್ಡವರಿಗೆ 6ಕಿ.ಜಿ. ಕಾರ್ಡಿಗೆ ಗರಿಷ್ಠ ಮಿತಿ 20 ಕಿ.ಜಿ. ಮಾತ್ರವಲ್ಲದೆ ಪ್ರತಿ ಕಾರ್ಡಿಗೆ 5ಕಿ.ಜಿ.ಯಂತೆ ಹೆಚ್ಚುವರಿಯಾಗಿ ಬಿಡುಗಡೆ ಮಾಡಲಾಗಿದೆ.

ಸಕ್ಕರೆ ಸಣ್ಣವರಿಗೆ 200ಗ್ರಾಂ, ದೊಡ್ಡವರಿಗೆ 400 ಗ್ರಾಂ ಮತ್ತು ಕಾರ್ಡಿಗೆ ಗರಿಷ್ಠ ಮಿತಿ 5ಕಿ.ಜಿ.ಗೆ ಮೀರದಂತೆ ಬಿಡುಗಡೆ ಮಾಡಲಾಗಿದೆ. ಗೋಧಿ ಕಾರ್ಡಿಗೆ 15ಕಿ.ಜಿ. ಪಾಮೋಲಿನ್ ಎಣ್ಣೆ ಒಂದು ಕಿ.ಜಿ. ಮತ್ತು ಸೀಮೆಎಣ್ಣೆ ಕಾರ್ಡಿಗೆ 12 ರಿಂದ 15 ಲೀಟರ್‌ವರೆಗೆ ಬಿಡುಗಡೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಆ. 11ರಂದು ನಗರಕ್ಕೆ ನೀರಿಲ್ಲ

ಮಂಗಳೂರು, ಆ. 8–ತುಂಬೆಯ ಯಂತ್ರ ಸ್ಥಾವರದಲ್ಲಿ ಹೊಳೆತ್ತುವ ಕಾರ್ಯದ ನಿಮಿತ್ತ ಆಗಸ್ಟ್ 11 ರಂದು (ಮಂಗಳವಾರ) ಬೆಳಗ್ಗೆ 9–00 ಸಂಜೆಯಿಂದ ಸಂಜೆ 4–30 ರವರೆಗೆ ಮಂಗಳೂರು ನಗರಕ್ಕೆ ನೀರು ಸರಬರಾಜು ಮಾಡುವಲ್ಲಿ ಅಡಚಣೆಯುಂಟಾಗುವುದೆಂದು ಪ್ರಕಟಣೆ ತಿಳಿಸಿದೆ.

ದಕ್ಷಿಣ ವಲಯ ಡಿಐಜಿ ಅಲ್ಬುಕರ್ಕ್ ಪದ ಸ್ವೀಕಾರ



ಮೈಸೂರು, ಆ. 8– ಬಿ.ಎಸ್.ಪಿ. ಅಲ್ಬುಕರ್ಕ್ ಅವರು ರಾಜ್ಯದ ದಕ್ಷಿಣ ವಲಯದ ಪೊಲೀಸ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಗಿ ಇತ್ತೀಚೆಗೆ ಅಧಿಕಾರ ಸ್ವೀಕರಿಸಿದರು.

ಮೂಲತಃ ದಕ್ಷಿಣ ಕನ್ನಡದವರೇ ಆದ ಇವರು ಪ್ರಾಥಮಿಕದಿಂದ ಪ್ರೌಢ ಶಾಲೆವರೆಗಿನ ವಿದ್ಯಾಭ್ಯಾಸವನ್ನು ಹೊರ ರಾಜ್ಯಗಳಲ್ಲಿ ಮುಗಿಸಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಎಂ. ಎ. ಲಿಟರೇಚರ್ ಮುಗಿಸಿ 1969ರಲ್ಲಿ ಭಾರತೀಯ ಪೊಲೀಸು ಸೇವೆಗೆ ಸೇರಿದರು.

ತರಬೇತಿ ನಂತರ 1971ರಲ್ಲಿ ಗುಲ್ಬರ್ಗಾ ಜಿಲ್ಲೆಯ ಯಾದಗಿರಿಯಲ್ಲಿ ಎ. ಎಸ್. ಪಿ.ಯಾಗಿ ಸೇವೆಯನ್ನಾರಂಭಿಸಿದ ಅವರು 1973ರಲ್ಲಿ ಬೀದರ್ ಜಿಲ್ಲಾ ಪೊಲೀಸು ಮುಖ್ಯಾಧಿಕಾರಿಯಾಗಿ ಬಡ್ತಿ ಪಡೆದರು.

ರಾಜ್ಯ ಸರ್ಕಾರದ ಸಂಸದೀಯ ವ್ಯವಹಾರ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಡೆಪ್ಯುಟಿ ಸೆಕ್ರೆಟರಿಯಾಗಿ, ವಿವಿಧ ಜಿಲ್ಲೆಗಳ ಎಸ್.ಪಿ. ಯಾಗಿ ಸೇವೆ ಸಲ್ಲಿಸಿರುವ ಅವರು 80ರಲ್ಲಿ ಸಿ.ಬಿ.ಐ., ಎಸ್.ಪಿ.ಯಾಗಿ ಕೇಂದ್ರ ಸೇವೆಗೆ ಹೋದರು. 85ರಲ್ಲಿ ರಾಜ್ಯ ಸೇವೆಗೆ ಮರಳಿದ ಅವರನ್ನು ಸಿಓಡಿ ವಿಶೇಷ ವಿಚಾರಣಾ ವಿಭಾಗದ ಎಸ್.ಪಿ.ಯಾಗಿ ನೇಮಿಸಲಾಯಿತು.

1986 ಏಪ್ರಿಲ್‌ನಿಂದ 87 ಫೆಬ್ರವರಿವರೆಗೆ ಬೆಂಗಳೂರು ನಗರದ ಅಪರಾಧ ವಿಭಾಗದ ಡೆಪ್ಯುಟಿ ಕಮಿಷನ್‌ರರಾಗಿದ್ದ ಅವರನ್ನು ಡಿ.ಐ.ಜಿಯಾಗಿ ಬಡ್ತಿ ನೀಡಿ ಮೈಸೂರು ನಗರದ ಪೊಲೀಸು ತರಬೇತಿ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಿಸಲಾಯಿತು. ನಂತರ ಡಾ। ಪಿ.ಎಸ್. ರಾಮಾನುಜಂ ಅವರ ವರ್ಗದಿಂದ ತೆರವಾದ ದಕ್ಷಿಣ ವಲಯ ಡಿ.ಐ.ಜಿ. ಸ್ಥಾನಕ್ಕೆ ಇವರನ್ನು ನೇಮಿಸಲಾಯಿತು.



ಹಳೆಯಂಗಡಿಯಲ್ಲಿ ನೀರಿಲ್ಲದೆ ಬಾಯ್ಬಿಟ್ಟ ಭತ್ತದ ಗದ್ದೆ

ಮಳೆಯ ತವರಿನಲ್ಲಿ ಬರದ ನೆರಳು

(ಮೊದಲ ಪುಟದಿಂದ)

ಈಗಷ್ಟೆ ಮೈನೆರೆದ ಹೆಣ್ಣಿನಂತೆ ಹಸಿರು ತುಂಬಿ ಕೊಂಡು ಲಜ್ಜೆಯ ಭಾರದಿಂದ ತೊನೆದಾಡ ಬೇಕಿದ್ದ ಭತ್ತದ ಪೈರು ರೋಗ ಹಿಡಿದ ಗೂಡಲಜ್ಜಿಯಂತೆ ಬಿಳಿಚಿ ಕೊಂಡು ನೆಲ ಹಿಡಿದಿದೆ. ಹಸಿರು ಪತ್ತಲ ಉಟ್ಟು ಮದುಮಗಳಂತೆ ಶೋಭಿಸಬೇಕಾಗಿದ್ದ ಭೂಮಿ ತಾಯಿ ತೇಪೆ ಹಾಕಿದ ಹರಕಲು ಸೀರೆ ಉಟ್ಟು ಭಿಕ್ಷುಕಿಯಂತೆ ಕಾಣುತ್ತಿದ್ದಾಳೆ. ಕೆಲವೆಡೆ ಮಳೆಗಿಂತ ಹೆಚ್ಚಾಗಿ ಮಳೆಗಾಗಿ ಕಾತರಿಸುತ್ತಿರುವ ರೈತರ ಕಣ್ಣೀರು ನೆಲಕ್ಕೆ ಬಿದ್ದಿದೆಯೇನೊ?

ಈ ರೈತರದು ವಿಚಿತ್ರ ಸ್ವಭಾವ ಕಳೆದ ಮಂಗಳವಾರ ಶಿವಮೊಗ್ಗದಲ್ಲಿದ್ದೆ. ಬೆಳಗ್ಗೆ ನನ್ನೊಡನೆ ಮಾತಾಡಿದ ರೈತರೊಬ್ಬರು ಬಾರದ ಮಳೆಯ ಬಗ್ಗೆ, ನಾಟಿಯಾಗದ ಗದ್ದೆಗಳ ಬಗ್ಗೆ ತೀವ್ರ ಆತಂಕದಿಂದ ಹೇಳಿಕೊಳ್ಳುತ್ತಿದ್ದರು. ಅದೇ ದಿನ ಸಂಜೆ ಮತ್ತೆ ಸಿಕ್ಕಿದಾಗ ಗೆಲುವಾಗಿದ್ದರು. ನೆರೆಯೊಂದಿಗೆ ತೇಲಿ ಹೋಗಿ ಮತ್ತೆ ದಡ ಸೇರಿದವನ ಸಮಾಧಾನ ಅವರ ಮಾತಿನಲ್ಲಿತ್ತು. ಕಾರಣ ಚೆನ್ನಗಿರಿಯಲ್ಲಿ ಒಂದು ಗಂಟೆ ಕಾಲ ಮಳೆ ಬಂದ ಸುದ್ದಿ ಆದೇ ತಾನೇ ಅವರಿಗೆ ತಲುಪಿತ್ತು.

ಮಳೆಬಾರದಿದ್ದಾಗ ಆಕಾಶವೇ ತಲೆ ಮೇಲೆ ಬಿದ್ದಂತೆ ತಹತಹಿಸುವ, ಎಲ್ಲಿಯೋ ಮಳೆ ಬಂತೆಂಬ ಸುದ್ದಿಯಿಂದಲೇ ಪುಳಕಗೊಂಡು ಇನ್ನೇನು ತನ್ನ ಗದ್ದೆಯಿದೀ ಮಳೆನೀರಲ್ಲಿ ಮುಳುಗಿ ಹೋಗುತ್ತದೆ ಎಂಬ ವಿಚಿತ್ರ ಸಮಾಧಾನದಲ್ಲಿ ತೇಲಾಡುವ ಮುಗ್ಧತೆಯೇ ಅವರ ಬದುಕನ್ನು ಬಲಿ ತೆಗೆದುಕೊಳ್ಳುತ್ತಿದೆ.

ಕಳೆದ ಭಾನುವಾರದಿಂದ ದಕ್ಷಿಣಕನ್ನಡ ವನ್ನೊಳಗೊಂಡಂತೆ ಉತ್ತರ ಕನ್ನಡ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಕೆಲವು ಭಾಗಗಳಲ್ಲಿ ಮಳೆಯಾಗುತ್ತಿದೆ. ಆದರೆ ಈ ಮಳೆಯಿಂದ ರೈತರು ಈಗಾಗಲೇ ಕಳೆದುಕೊಂಡದ್ದನ್ನು ಮತ್ತೆ ಪಡೆಯಲಾರರು, ದಿವಸಕ್ಕೆ ಒಂದು ಗಂಟೆ ಮಳೆ ಬಂದರೆ ಅದರ ಬೆನ್ನಲ್ಲೇ ಅದನ್ನು ಹೀರಿಬಿಡಲು ದಣಿ ಬಿಸಿಲು ಅಟ್ಟಿಕೊಂಡು ಬರುತ್ತಿದೆ.

ಬಿತ್ತನೆಯ ಭತ್ತದ ಸೇಜ ಬಲಿತು ಗಂಜಾಗಿದೆ. ಕೆಲವರು ಬಿತ್ತಿದ ಬೀಜವೇ ಕೊಳೆತು ಹೋಗಿದೆ. ಇವರೆಲ್ಲ ಬಿತ್ತನೆಗೆ ಹೊಸ ಬೀಜವನ್ನು ಎಲ್ಲಿಂದ ತಂದಾರು? ಕಷ್ಟಪಟ್ಟು ಬಿತ್ತಿದ್ದರೂ, ಕೊನೆವರೆಗೆ ಮಳೆ ಬರುತ್ತದೆ ಎಂಬ ಗ್ಯಾರಂಟಿ ಏನು? ಈ ಕಾರಣದಿಂದ ಈಗ ಬರುತ್ತಿರುವ ಅಲ್ಪ ಸ್ವಲ್ಪ ಮಳೆಯಿಂದ ಇನ್ನು ಬರುವ ಮಳೆಯಿಂದ ರೈತರ ಸ್ಥಿತಿ ಸುಧಾರಿಸಲಾರದು. ತೆಂಗು, ಅಡಿಕೆ ಮತ್ತು ಕಾದಿರುವ ನೀರಿಗೆ ಒಂದಷ್ಟು ಪ್ರಯೋಜನವಾಗಬಹುದು.

ಮಳೆಯಿಲ್ಲದೆ ನಾಟಿಯಾಗದೆ ಗದ್ದೆಗಳು ಪಾಳು ಬಿದ್ದಿವೆ. ನಾಟಿಯಾದ ಪೈರುಗಳು ಕೂಡಾ ಒಣಗಿ ನೆಲ ಹಿಡಿದಿವೆ. ಬರದ ಕರಾಳ ಛಾಯೆ ಇಡೀ ರೈತ ಸಮುದಾಯವನ್ನು ಆವರಿಸಿದೆ. ಈಗಾಗಲೇ ರೈತರು ತಮ್ಮ ಅನ್ನದ ಬಗ್ಗೆ ದನಗಳ ಮೇವಿನ ಬಗ್ಗೆ ಚಿಂತಿಸುತ್ತಾ ಗೋಳಾಡುತ್ತಿದ್ದಾರೆ. ಕೃಷಿ ಇಲಾಖೆಯಲ್ಲಿ ಮಾತ್ರ "ನೀರೋನ ಪಿಟೀಲು ವಾದನ" ಕೇಳಿಸುತ್ತಿದೆ.

ಮಾತೆತ್ತಿದರೆ "ಆಣೆವಾರು" "ಶೇಕಡವಾರು" ಎಂದೆಲ್ಲ ಸಿದ್ಧ ವರದಿಯನ್ನು ಗಿಳಿ ಪಾಠ ಒಪ್ಪಿಸುವ ಕೃಷಿ ಅಧಿಕಾರಿಗಳಾಗಲೀ ತಂತ್ರಜ್ಞರಾಗಲೀ ಅನಾವೃಷ್ಟಿಯ ಭೀಕರತೆ ತಟ್ಟಿದಂತೆ ಕಾಣಲಿಲ್ಲ. "ಈಗಲೂ ಮಳೆ ಬಂದರೂ ಸುಧಾರಿಸಬಹುದು. ಏನೂ ತೊಂದರೆಯಾಗಲಾರದು" ಎಂಬಿತ್ಯಾದಿ ಬಾಯುಪಚಾರದ ಭರವಸೆಗಳನ್ನು

ನೊಂದ ರೈತರಿಗೆ ಪುಕ್ಕಟೆಯಾಗಿ ಮಾರಾಟ ಮಾಡುತ್ತಾ ಅವರು "ಪರ್ಜನ್ಯಜಪ"ದಲ್ಲಿ ತೊಡಗಿದ್ದಾರೆ.

ಸರಕಾರದಿಂದ ರೈತರಿಗೆ ಸಿಗಬಹುದಾದ ಅಲ್ಪ ಸ್ವಲ್ಪ ಸಹಾಯಕ್ಕೆ ಈ ಅಧಿಕಾರಿಗಳು ಹೇಗೆ ಕಲ್ಲು ಹಾಕುತ್ತಿದ್ದಾರೆ ಎಂಬುದನ್ನು ಹಲವಾರು ರೈತರು ಉದಾಹರಣೆ ಸಹಿತ ವಿವರಿಸಿದರು.

ಕಳೆದ ವರ್ಷವೂ ಅಂಕೋಲದಲ್ಲಿ ಮಳೆ ಕೈಕೊಟ್ಟು ಕಾರಣ ಫಸಲು ತೃಪ್ತಿಕರವಾಗಿರಲಿಲ್ಲ. ಆದರೆ ಅಧಿಕೃತ ಲೆಕ್ಕಾಚಾರದ ಪ್ರಕಾರ ಎಂಟಾಣೆ ಬೆಳೆಯಾಗಿತ್ತು. ಎರಡಾಣೆ ಕಡಿಮೆ ಮಾಡಿದ್ದರೆ 'ಬರ ಪ್ರದೇಶ' ಎಂದು ಘೋಷಿಸಬಹುದಾಗಿತ್ತು. ಬರ ಸಮೀಕ್ಷೆಯ ಕೆಲಸದ ಹೊರೆಯಿಂದ ತಪ್ಪಿಸಲಿಕ್ಕಾಗಿಯೇ ಕೃಷಿ ಅಧಿಕಾರಿಗಳು ಈ ತಂತ್ರ ಉಪಯೋಗಿಸುತ್ತಾರೆಂದು ರೈತರ ದೂರು.

ಉತ್ತರ ಕರ್ನಾಟಕದ ಬೋಳುಗುಡ್ಡ ಬೆಂಗಾಡು ನೆಲವನ್ನು ಮಾತ್ರ ಬರಪೀಡಿತ ಪ್ರದೇಶ ಎಂದು ನಂಬಿರುವವರಿಗೆ ಮ[illegible] ಇಲ್ಲದಿದ್ದರೆ ಹಸಿರನ್ನು ಪೂರ್ತಿ ಕಳೆದುಕೊಳ್ಳದ ಮಲೆನಾಡಿನ ನೆಲ ಇ[illegible] ಸಮೃದ್ಧವಾಗಿ ಕಂಡಿರಬೇಕು.

ನಾಲ್ಕಾಣಿ ಬೆಳೆಯಬೇಕಾದ ಭ[illegible] ಪೈರು ಕೇವಲ ಎರಡಡಿಯಲ್ಲಿಯೇ [illegible] ಲಿಗೆ ಬಂದರೆ ಕೃಷಿ ಇಲಾಖೆಯ [illegible] ಚಾರದಲ್ಲಿ ಎಂಟಾಣೆ ಬೆಳೆ. ಆದರೆ [illegible] ವಾಸ್ತವ ಲೆಕ್ಕಾಚಾರದಲ್ಲಿ ಅದು [illegible] ನಷ್ಟ. ಇದನ್ನು ಕೃಷಿ ಇಲಾ[illegible] ಬುದ್ಧಿವಂತರಿಗೆ ತಿಳಿಸುವವರ್ಯಾರು?... ರೈತರ ಪ್ರಶ್ನೆ.

ಮಳೆಯ ಲೆಕ್ಕಾಚಾರ[illegible] ಇಲಾಖೆ ಮಾಡುವ ಇಂತಹದೇ ತಪ್ಪನ್ನು ಎತ್ತಿ ತೋರಿಸುತ್ತಾರೆ. ಸಾಮಾನ್ಯವಾಗಿ ಭತ್ತಕ್ಕೆ ದಿನಕ್ಕೆ ಸರಾಸರಿ ಹತ್ತರಿಂದ ಹನ್ನೆರಡು ಮಿ. ಮೀ. ಮಳೆ ಬೇಕು. ಭತ್ತ ಬೆಳೆಯುವ ಪ್ರದೇಶದಲ್ಲಿ 12 ಮಿ. ಮೀ. ಮಳೆ ಬಂದರೆ ಮಾತ್ರ 'ಮಳೆ ದಿನ' ಎಂದು ಪರಿಗಣಿಸಬಹುದು. ಆದರೆ ಇಲಾಖೆ ಇದ್ಯಾವುದನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಬಳ್ಳಾರಿಯ 'ಮಳೆದಿನ'ವೇ ಶಿವಮೊಗ್ಗದ 'ಮಳೆದಿನ' ಹೇಗಾದೀತು?

ಈಗಾಗಲೇ ರಾಜ್ಯದಾದ್ಯಂತ ಬರ ಸಮೀಕ್ಷೆ ಭರದಿಂದ ನಡೆಯುತ್ತಿದೆ. ಅದು ವಾಸ್ತವ ಸ್ಥಿತಿಯ ಚಿತ್ರವನ್ನು ನೀಡೀತೇ? ಯಾಕೆಂದರೆ ಮುಗ್ಧತೆ ಮತ್ತು ಪ್ರಾಮಾಣಿಕತೆಗಳನ್ನು ತುಂಬಿಕೊಂಡ ಈ ಹುಂಬ ರೈತರಿಗೆ ಕೃಷಿಯ ಲಾಭ-ನಷ್ಟದ ಲೆಕ್ಕ ತೋರಿಸಿ ತೆರಿಗೆಯಿಂದ ತಪ್ಪಿಸಿಕೊಳ್ಳುವ ವ್ಯಾಪಾರೀ ವರ್ಗದ ಚಾಣಾಕ್ಷತನವೂ ಇವರಿಗಿಲ್ಲ.

ಈ ಎಲ್ಲ ಕಾರಣಗಳಿಂದಾಗಿ ಬರ ಸಮೀಕ್ಷೆಗೆ ರೈತರು ನೀಡುವ ಮಾಹಿತಿ ಕೂಡಾ ಪೂರ್ಣ ನಿಜ ಸ್ಥಿತಿಯನ್ನು ಬಿಂಬಿಸಲಾರದು. ಪ್ರಸಕ್ತ ಬೆಲೆ ನೀತಿಯಿಂದಾಗಿ ನಷ್ಟದಾಯಕವಾದ ಭತ್ತದ ಬೇಸಗೆ ಮೂಳಿನಂತೆ ಅದಕ್ಕೆ ಜೋತು ಬಿದ್ದವರು ಇವರು. ನನ್ನ ಸಂತ್ರಾಟದುದ್ದಕ್ಕೂ ಎದುರಾದ ರೈತರೆಲ್ಲರು ಒಂದೇ ಪಡಿಪಾಟಲಿನಲ್ಲಿ ಎರಕಹೊಯ್ದಂತಿದ್ದರು. ಶಿವಮೊಗ್ಗ ಜಿಲ್ಲೆಯ ಕೆಲವು ಭಾಗಗಳ ರೈತರು ರೈತ ಸಂಘದ ಚಟುವಟಿಕೆಗಳಿಂದ ತುಸು ಪ್ರಬುದ್ಧರಂತೆ ಕಂಡರೂ ಉಳಿದಲ್ಲೆಡೆಯಲ್ಲೆಲ್ಲ ರೈತರದು ಒಂದೇ ತಳ.

ತನ್ನ ಭವಿಷ್ಯ ಹೊತ್ತಿ ಉರಿಯುತ್ತಿದ್ದರೂ ರೈತರದು ಅದೇ ನಿರ್ಲಿಪ್ತಭಾವ. ಬಂದದ್ದನ್ನೆಲ್ಲಾ ತಲೆತಗ್ಗಿಸಿ ಸ್ವೀಕರಿಸುವ ಸಮಚಿತ್ತ. ನೂರು ಕಷ್ಟವನ್ನು ಮೂರೇ ಮಾತಿನಲ್ಲಿ ಹೇಳಿ ದುಃಖವನ್ನೆಲ್ಲ ತನ್ನ ಕಣ್ಣೆದೆಯಲ್ಲಿ ಹುದುಗಿಸಿಕೊಳ್ಳುವ ವಿಲಕ್ಷಣ ಜಾಯಮಾನ.

ಸಿಟಿಬಸ್‌ಗಳ ತಂಗುದಾಣ ಬದಲಾವಣೆ: ಆತಂಕ

ಮಂಗಳೂರು, ಆ. 8– ನಗರದ ಸಿಟಿ ಬಸ್‌ಗಳ ತಂಗುದಾಣವನ್ನು ಬದಲಾಯಿಸಿರುವುದರಿಂದ ಹೆಚ್ಚಿನ ಜನರಿಗೆ ಮುಖ್ಯವಾಗಿ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗಿದೆ ಎಂದು ನಗರದ ಸರಕಾರಿ ಕಾಲೇಜಿನ ಅಧ್ಯಕ್ಷ ಮತ್ತು ಕಾರ್ಯದರ್ಶಿಯವರು ದ.ಕ. ಜಿಲ್ಲಾಧಿಕಾರಿಯವರಿಗೆ ದೂರಿದ್ದಾರೆ.

ಎಲ್ಲಾ ಸಿಟಿ ಬಸ್ಸುಗಳು ಹಂಪನಕಟ್ಟೆಯ ಮುಖ್ಯ ರಸ್ತೆಯಿಂದ, ಸರಕಾರಿ ಕಾಲೇಜು ಮುಂಭಾಗದಿಂದ ಹೋಗುವಾಗ ಜಿಲ್ಲಾ ಪರಿಷತ್ ಕಚೇರಿ ಎದುರುಗಡೆ ಮತ್ತು ಸ್ಟೇಟ್ ಬ್ಯಾಂಕ್ ಬಳಿ ಕಡ್ಡಾಯವಾಗಿ ನಿಲ್ಲಿಸಿ, ಜನರನ್ನು ಹತ್ತಿಸಿಕೊಂಡು ಹೋಗಬೇಕೆಂದು ಅವರು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮನವಿಯಲ್ಲಿ ತಿಳಿಸಿದ್ದಾರೆ.

ಬಂದರು ಕಡೆಯಿಂದ ಬರುವ ಸಿಟಿ ಬಸ್ಸುಗಳು ಲೇಡಿಗೋಷನ್ ಆಸ್ಪತ್ರೆಯ ಬಳಿ ನಿಲ್ಲಿಸಬೇಕೆಂದೂ ಅವರು ಒತ್ತಾಯಿಸಿದ್ದಾರೆ.

ಪ್ರಸ್ತುತ ಬಸ್ ತಂಗುದಾಣದ ಬದಲಾವಣೆಯಿಂದ ವಿದ್ಯಾರ್ಥಿಗಳು ಎರಡು ಬಸ್ಸುಗಳನ್ನು ಹಿಡಿದು ಶಾಲಾ ಕಾಲೇಜುಗಳಿಗೆ ಹೋಗಬೇಕಾದ ಪರಿಸ್ಥಿತಿ ಬಂದಿರುವುದರಿಂದ, ಇದು ಅಗತ್ಯವಾಗಿದೆ ಎಂದು ಅವರು ಮನವಿಯಲ್ಲಿ ತಿಳಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ಪರ್ಸೀನ್ ಮೀನುಗಾರರ ಸಹಕಾರಿ ಸಂಘ ನಿಯಮಿತ

ಸ್ಥಾಪನೆ: 1979 ದೂರವಾಣಿ: 27010

ಲೈಸನ್ಸ್ ನಂಬ್ರ: 6740

ಸೌತ್ ವಾರ್ಫ್, ಬಂದರ, ಮಂಗಳೂರು-575001

ಬೇಕಾಗಿದ್ದಾರೆ

ಸೆಪ್ಟಂಬರ 1ರಿಂದ ಪ್ರಾರಂಭವಾಗಿ ಮೇ 31ಕ್ಕೆ ಅಂತ್ಯಗೊಳ್ಳುವ ಸಮುದ್ರ ಮೀನುಗಾರಿಕೆಗೆ ಅನುಸಾರವಾಗಿ (ಸೀಸನಲ್) ಮಂಗಳೂರು ಮೀನುಗಾರಿಕಾ ಬಂದರದಲ್ಲಿರುವ ನಮ್ಮ ಸಂಘದ ಡೀಸಿಲ್ ಬಂಕಿನಲ್ಲಿ ಕೆಲಸ ಮಾಡುವರೇ ಈ ಕೆಳಗಿನ ಕೆಲಸಗಾರರು ಬೇಕಾಗಿದ್ದಾರೆ.

1. ಡೀಸಿಲ್ ಕೊಡುವವರು — 4
2. ಬಿಲ್ ಕ್ಲಾರ್ಕ್ — 1
3. ಸಹಾಯಕ ಕಾರ್ಯದರ್ಶಿ — 1 ಬಿ.ಕಾಂ. ಪದವೀಧರ

ಅನುಭವಿ, ವಿಶ್ವಾಸ ಹಾಗೂ ಏಕೇಯತೆಯಿಂದ ಕೆಲಸ ಮಾಡುವವರಿಗೆ ಪ್ರಾಶಸ್ತ್ಯ. ಅರ್ಜಿ ಕೊಡುವರೇ ಅವಕಾಶ, ಆಗೋಸ್ತು 10, 1987ರಿಂದ ಆಗೋಸ್ತು 17, 1987ರ ವರೆಗೆ.

ಆಯ್ಕೆಗಾಗಿ ಉಮೇದ್ವಾರರ ಸಂದರ್ಶನ 20-8-1987ನೇ ಗುರುವಾರ ಬೆಳಗ್ಗೆ ಗಂಟೆ 11ಕ್ಕೆ ಮಂಗಳೂರು ಮೀನುಗಾರಿಕಾ ಬಂದರಿನಲ್ಲಿರುವ ನಮ್ಮ ಡೀಸಿಲ್ ಬಂಕಿನಲ್ಲಿ.

ಅಧ್ಯಕ್ಷರು,

ದಕ್ಷಿಣ ಕನ್ನಡ ಜಿಲ್ಲಾ ಪರ್ಸೀನ್ ಮೀನುಗಾರರ ಸಹಕಾರಿ ಸಂಘ ನಿಯಮಿತ
ಸೌತ್ ವಾರ್ಫ್, ಬಂದರ, ಮಂಗಳೂರು-575001

ಹೆಸರು ಬದಲಾವಣೆ: ನಾನು ಕಾಪು ಪಡು ಗ್ರಾಮದ ಮೀರಾ ಬ್ಯಾರಿಯವರ ಮಗ ಕಾದ್ರಿ ಬ್ಯಾರಿಯು ನನ್ನ ಸ್ವ ಇಚ್ಛೆಯಿಂದ ಇನ್ನು ಮುಂದಕ್ಕೆ ನನ್ನ ಹೆಸರನ್ನು ಅಬ್ದುಲ್ ಖಾದ್ರಿ ಮೀರಾ ಬ್ಯಾರಿ ಎಂದು ಬದಲಾಯಿಸಿರುತ್ತೇನೆ.

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಅಭಿಯಂತರರು,
ಪಿಡಬ್ಲ್ಯುಡಿ, ಬಂದರು ವಿಭಾಗ,
ಕಾರವಾರ.

ಅವಧಿ ವಿಸ್ತರಣೆ

ಕಾರವಾರ ಬಂದರು ಯೋಜನೆಯಲ್ಲಿ ಆಲ್ ದಂಡೆಯನ್ನು ಕಟ್ಟುವ ಸ್ಥಳದ ಕೂಡು ರಸ್ತೆಯ ದುರಸ್ತಿ ಹಾಗೂ ಅಗಲ ಮಾಡುವುದರ ಕುರಿತು. ಪ್ರಕಟಣೆಯು ಕ್ರ.ಸಂ.ಪಿಡಬ್ಲ್ಯು:ಟೆಂಡರ್:86-87:ಡಿಬಿ:2309 ದಿ: 29–1–87 ಹಾಗೂ ತದನಂತರದ ಪ್ರಕಟಣೆಗಳಲ್ಲಿ ಆಹ್ವಾನಿಸಲಾಗಿದ್ದ ಟೆಂಡರನ್ನು ಮುಂದೂಡಲಾಗಿದೆ. ಅಂತೆಯೇ ಟೆಂಡರ್ ಫಾರಂಗಳನ್ನು ಕೊಡುವ ದಿ: 18–8–87ರ ಸಂಜೆ 4 ಗಂಟೆಯವರೆಗೆ. ಟೆಂಡರುಗಳನ್ನು ಸ್ವೀಕರಿಸುವ ದಿ: 25–8–87ರ ಸಂಜೆ 4 ಗಂಟೆಯವರೆಗೆ. ಇನ್ನುಳಿದ ಯಾವುದೇ ಬದಲಾವಣೆಗಳಿಲ್ಲ.

ವಾ.ಪ್ರ.ಇ. 1733

ಮೋಪೆಡ್ ಉರುಳಿ ಗಾಯ

ಉಡುಪಿ, ಆ. 8–ಇಲ್ಲಿಗೆ ಸಮೀಪದ [illegible] ಆ. 4 ರಂದು ಅಂಬಾಗಿಲಿನಿಂದ ಬನ್ನಂಜೆಗೆ ಮೋಪೆಡ್ ವಾಹನದಲ್ಲಿ ಹೋಗುತ್ತಿದ್ದ ದಿವಾಕರ ಕಾಮತ್ ಮತ್ತು ಸಂತೋಷ ಮಥಾಯಸ್ ಅವರು ಆಕಸ್ಮಾತ್ ಮೋಪೆಡ್ ಸ್ಕಿಡ್ ಆಗಿ ಉರುಳಿ ಬಿದ್ದ ಪರಿಣಾಮವಾಗಿ ಗಾಯಗೊಂಡು, ಆಸ್ಪತ್ರೆಗೆ ದಾಖಲಾಗಿದ್ದಾರೆ. ಟ್ರಾಫಿಕ್ ಪಿ. ಎಸ್. ಐ. ಗಂಗಾಧರ ತನಿಖೆ ನಡೆಸುತ್ತಿದ್ದಾರೆ.

ಶ್ರೀಗಂಧ ವಶ

ಮಂಗಳೂರು, ಆ. 8–ಮಂಗಳೂರು ಅರಣ್ಯ ಪೊಲೀಸ್ ದಳದವರು ಶುಕ್ರವಾರ ಬಸ್ಸೊಂದರಲ್ಲಿ ಸುಮಾರು 3500ರೂ. ಮೌಲ್ಯದ ಸುಮಾರು 35 ಕಿ. ಜಿ.ಗಳಷ್ಟು ಶ್ರೀಗಂಧವನ್ನು ವಶಪಡಿಸಿಕೊಂಡಿದ್ದಾರೆ.

ಈ ಸಂಬಂಧ ಆರೋಪಿ ಸೇವಿರ ಪೂಜಾರಿ ಎಂ ಬ ವ ನ ನ್ನು ಬಂಧಿಸಿ ನ್ಯಾಯಾಂಗ ಕಸ್ಟಡಿಯಲ್ಲಿಡಲಾಗಿದೆ. ಈತ ಸಕಲೇಶಪುರದಿಂದ ಈ ಗಂಧವನ್ನು ತರುತ್ತಿದ್ದಾಗ ಬಂಧಿಸಲಾಯಿತು. ಕದ್ರಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ನಗರದ ಆರು ಕಡೆಗಳಲ್ಲಿ ಪ್ರಭಾತಭೇರಿ ಕಾರ್ಯಕ್ರಮ

[illegible] ಆ. 8– ಮಕ್ಕಳಲ್ಲಿ ಸ್ವಾತಂತ್ರ್ಯೋತ್ಸವದ ಬಗೆಗೆ ಜಾಗೃತಿ ಹಾಗೂ ಉತ್ಸಾಹ ಮೂಡಿಸುವ ದೃಷ್ಟಿಯಿಂದ ಮಂಗಳೂರು ನಗರದ ಆರು ವಿಭಾಗಗಳಲ್ಲಿ ಆಗಸ್ಟ್ 9ರಿಂದ 14ರ ವರೆಗೆ ಮುಂಜಾನೆ 7-30ರಿಂದ 8-15ರ ವರೆಗೆ ಪ್ರಭಾತ ಭೇರಿ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿದೆ.

ಈ ವರ್ಷದ ಸ್ವಾತಂತ್ರ್ಯೋತ್ಸವದ ಅಂಗವಾಗಿ ಇದನ್ನು ಹಮ್ಮಿಕೊಳ್ಳಲಾಗಿದೆ.

ಆಗಸ್ಟ್ ಒಂಭತ್ತರಂದು ಗಾಂಧಿನಗರದ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಎ. ಸ್ಟುವಾರ್ಟ್ ಅವರ ನೇತೃತ್ವದಲ್ಲಿ ಉರ್ವ ಕ್ಷೇತ್ರದ ಪ್ರಭಾತಭೇರಿಯು ಉರ್ವ ಮಾರ್ಕೆಟಿನಿಂದ ಪ್ರಾರಂಭವಾಗಿ ಗಾಂಧಿ ನಗರದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮೈದಾನದಲ್ಲಿ ಕೊನೆಗೊಳ್ಳಲಿದೆ.

ಆಗಸ್ಟ್ 10 ರಂದು ಸ್ಟೇಟ್ ಜೋನ್ಸ್ ಹಿ.ಪ್ರಾ. ಶಾಲೆಯ ಮುಖ್ಯೋಪಾಧ್ಯಾಯಿನಿ ಮೋನಿಕಾ ಡಿ'ಸೋಜರ ಮುಂದಾಳ್ವತನದಲ್ಲಿ ಜೆಪ್ಪು ಕ್ಷೇತ್ರದ ಪ್ರಭಾತ ಭೇರಿಯು ಕಾಸ್ಸಿಯಾ, ಮಂಗಳಾದೇವಿ, ಜೆಪ್ಪು ಮಾರ್ಕೆಟ್ ಆಗಿ ಸ್ಟೇಟ್ ರೀಟ-ದಲ್ಲಿ ಕೊನೆಗೊಳ್ಳಲಿದೆ.

ಈ ಪ್ರಭಾತ ಭೇರಿ ಕಾರ್ಯಕ್ರಮದಲ್ಲಿ ಮಕ್ಕಳು ದೇಶಭಕ್ತಿಗೀತೆ ಹಾಗೂ ಘೋಷಣೆ ಕೂಗುವರು. ಕಾರ್ಯಕ್ರಮದಂತ್ಯದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಭಾಷಣ ಮಾಡಲಿದ್ದಾರೆ.

● ಉಡುಪಿ, ಆ. 8–ಉಡುಪಿ ವಲಯದ ಅಬಕಾರಿ ಗುಪ್ತ ವಾರ್ತಾ ಕಚೇರಿಯ ಉಪ ಅಧೀಕ್ಷಕ ಎಸ್. ಟಿ. ವಿಜಯೇಂದ್ರ ಮತ್ತು ಉಡುಪಿ ವಿಭಾಗದ ಉಪಅಧೀಕ್ಷಕ ವೈ. ಎಸ್. ಶಿವಸ್ವಾಮಿ ಇವರು ಇತ್ತೀಚೆಗೆ ಕುಂದಾಪುರದಲ್ಲಿ ವಿದೇಶಿ ಮದ್ಯ ದಂಗಡಿಗಳ ಮೇಲೆ ದಾಳಿ ನಡೆಸಿ, ಪರವಾನ ಪರತ್ತು ಉಲ್ಲಂಘಿಸಿದ ಒಬ್ಬ ಲೈಸನ್ಸುದಾರರ ಮೇಲೆ ಮೊಕದ್ದಮೆ ದಾಖಲು ಮಾಡಿರುತ್ತಾರೆ.

ಇಂದು ಕೊಟ್ಟಾರದಲ್ಲಿ ರಕ್ಷಾ ಬಂಧನ

ಮಂಗಳೂರು, ಆ. 8 - ನಗರದ ಕೊಟ್ಟಾರ ಕ್ರಾಸ್‌ನ ಪ್ರಜಾಪಿತ ಬ್ರಹ್ಮಾ ಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯವು ಆಗಸ್ಟ್ 9 ರಂದು (ಭಾನುವಾರ) ರಕ್ಷಾಬಂಧನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಮಂಗಳೂರು ಮಹಾ ನಗರ ಪಾಲಿಕೆ ಮೇಯರ್ ಅಜಿತ್ ಕುಮಾರ್ ಅವರು, ಅಂದು ಬೆಳಗ್ಗೆ 11 ಗಂಟೆಗೆ ರಾಜಯೋಗ ಭವನದಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸುವರು.

ರಕ್ಷಾ ಬಂಧನ ಕಾರ್ಯಕ್ರಮವು ಅಂದು ಮಧ್ಯಾಹ್ನ ಮೂರು ಗಂಟೆಗೆ ನಗರದ ಜಿಲ್ಲಾ ಕಾರಾಗೃಹದಲ್ಲೂ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಜೋಕಟ್ಟೆ ಮಸೀದಿ ವಿಸ್ತರಣಾ ಕಟ್ಟಡದ ಶಂಕು ಸ್ಥಾಪನೆ

ಜೋಕಟ್ಟೆ, ಆ. 8 - ಇಲ್ಲಿನ ಹೊಸ ಜುಮ್ಮಾ ಮಸೀದಿಯ ವಿಸ್ತರಣಾ ಕಟ್ಟಡದ ಶಂಕು ಸ್ಥಾಪನೆಯು ಆಗಸ್ಟ್ 9 ರಂದು ಬೆಳಗ್ಗೆ 11ಕ್ಕೆ ಕಾಸರಗೋಡು ಸುನ್ನಿ ಯುವಜನ ಸಂಘದ ಅಧ್ಯಕ್ಷ ಕೆ. ಎಸ್. ಅಟಕೋಯ ತಂಗಳ್-ಕುಂಬೋಳ್ ಇವರಿಂದ ನೆರವೇರಲಿದೆ.

ಬಂಟ್ವಾಳ ಸೀರತ್ ಕಮಿಟಿ ಅಧ್ಯಕ್ಷ ಬಿ. ಅಹ್ಮದ್ ಹಾಜಿ ಮೊಹಿಯುದ್ದೀನ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿರುವರು.

ಮುಖ್ಯ ಅತಿಥಿಗಳಾಗಿ ಉಳ್ಳಾಲ ಸಯ್ಯದ್ ಮದನಿ ದರ್ಗಾದ ಅಧ್ಯಕ್ಷ ಹಾಜಿ ಯು. ಕೆ. ಇಬ್ರಾಹಿಂ, ಮಾಜಿ ರಾಜ್ಯ ಸಭಾ ಸದಸ್ಯ ಬಿ. ಇಬ್ರಾಹಿಂ, ಮಾಜಿ ಶಾಸಕ ಬಿ. ಎ. ಮೊಹಿದಿನ್ ಹಾಗೂ ಇತರ ಗಣ್ಯರು ಆಗಮಿಸಲಿರುವರು.

ಮೀನು ಕದ್ದರು!

ಕಾಸರಗೋಡು, ಆ. 8– ಕಾಸರಗೋಡು ಮೀನು ಮಾರು ಕಟ್ಟೆಯಿಂದ ಆ. 4 ರಂದು ರಾತ್ರಿ ಸುಮಾರು ನಾಲ್ಕು ಸಾವಿರ ರೂ. ಬೆಲೆಬಾಳುವ ಎರಡು ಸಾವಿರ ಕಿ. ಜಿ ಗಳಷ್ಟು ಮೀನು ಕಳವಾಗಿರುವುದಾಗಿ ವರದಿಯಾಗಿದೆ.

ಬಕ್ರೀದ್ ಹಬ್ಬದ ಬೇಡಿಕೆಯಿಂದಾಗಿ ಮಂಗಳೂರಿನಿಂದ ಮುಂಚಿನ ದಿನವೇ ತಂದು ಶೇಖರಿಸಿಡಲಾಗಿದ್ದ ಈ ಮೀನನ್ನು ಯಾರೋ ವಾಹನಗಳಲ್ಲಿ ತುಂಬಿ ದೋಚಿರುವುದಾಗಿ ಶಂಕಿಸಲಾಗಿದೆ.

ಮಾರನೆ ದಿನ ಮಾರ್ಕೆಟಿಗೆ ಬಂದ ವ್ಯಾಪಾರಿಗಳು ತಾವು ಶೇಖರಿಸಿಟ್ಟ ಮೀನು ಕಳವಾಗಿರುವುದನ್ನು ಅರಿತು ನಿಬ್ಬೆರಗಾಗಿ, ಮೀನು ಗಸ್ಟ್‌ರಿಗೆ ಓಡಿ ದೂರು ಹಾಕತೊಡಗಿದರು.

‘55 ವರ್ಷಗಳ ಹಿಂದೆ ಹೀಗೆಯೇ ಆಗಿತ್ತು’

(ಮುಂಗಾರು ವರದಿ)

ಉಡುಪಿ, ಆ. 8– "ಮಳೆಯ ತೀವ್ರ ಕುಸಿತದಿಂದಾಗಿ ಭತ್ತದ ಬೆಳೆಗೆ ಆದ ಅಪಾರ ಹಾನಿಯ ಅನುಭವ ಇದೇ ಮೊದಲಲ್ಲ. ಸುಮಾರು 55ವರ್ಷದ ಹಿಂದೆಯೂ ಇಂತಹುದೇ ಪ್ರಾಕೃತಿಕ ವಿಕೋಪ ಉಂಟಾಗಿತ್ತು" ಎಂದು ಉಪ್ಪೂರಿನ ಹಿರಿಯ ಭತ್ತದ ಕೃಷಿಕರಾದ ಶಿವರಾಮ ಭಟ್ಟರು (78) 'ಮುಂಗಾರು' ಪ್ರತಿನಿಧಿಗೆ ತಿಳಿಸಿದರು.

55 ವರ್ಷದ ಹಿಂದೆ ಪುಷ್ಯಾನಕ್ಷತ್ರದಲ್ಲೂ ಮಳೆ ಬಾರದೇ ಇದ್ದಾಗ ತಾವು ಸಂಬಳಿಗೆಯಿಂದ ಕೆರೆಯ ನೀರನ್ನು ಗದ್ದೆಗೆ ಬಿಟ್ಟು, ನಾಟಿ ಮಾಡಿದುದಾಗಿಯೂ ಮೆಲುಕಾಡಿದರು. ಆ ವರ್ಷದ ಭತ್ತದ ಬೆಳೆ ಅರ್ಧಕ್ಕರ್ಧ ಕಡಿಮೆಯಾಗಿದ್ದು, ಅಕ್ಕಿ ಮುಡಿಗೆ 4ರೂ. ಇದ್ದುದ್ದು ಮರು ವರ್ಷ ಎಂಟು ರೂ.ಗಳಿಗೆ ಏರಿದ್ದನ್ನೂ ನೆನಪು ಮಾಡಿಕೊಂಡರು.

ಸಾಮಾನು-ಸರಂಜಾಮಿನ ಸರಬರಾಜಿಗೆ ಈಗಿನಂತೆ ಅನುಕೂಲತೆ ಇರದಿದ್ದುದೂ ಆಗಿನ ಧಾರಣೆ ಏರಲು ಕಾರಣವೆಂದೂ, ಆಗ ಉಡುಪಿಯ ಮುಸ್ಲಿಂ ವ್ಯಾಪಾರಿಗಳೊಬ್ಬರು ಕರಾಚಿಯಿಂದ ಅಕ್ಕಿ ತರಿಸಿ, ಜನತೆಗೆ ಆದಷ್ಟು ಕಡಿಮೆ ಬೆಲೆಗೆ ವಿತರಿಸಿದರೆಂದೂ ಹೇಳಿದರು.

ಹುಳ ಬಾಧೆ

ಮಳೆ ನಕ್ಷತ್ರಗಳೆಂದು ಹೇಳಲಾದ ಪುನರ್ವಸು, ಪುಷ್ಯಾ ನಕ್ಷತ್ರಗಳಲ್ಲಿ ವಿಪುಲ ಮಳೆ ಬಂದು, ಭತ್ತದ ಪೈರಿನ ಬಾಡದಲ್ಲಿ ನೀರು ಸಂಗ್ರಹವಾಗುವುದು ರೂಢಿ. ಆಗ ಭತ್ತದ ಸಸಿ ಬಿಸಿಲೊಡನೆ ಮೇಲೆ ತೋರುವುದು ಅಲ್ಲದೆ ಹುಳದ ಬಾಧೆಯೂ ಇರುವುದಿಲ್ಲವೆಂದು ತಮ್ಮ ಅನುಭವವನ್ನು ತೋಡಿಕೊಂಡ ಭಟ್ಟರು, ಹೀಗೆ ಮಳೆ ಕೈಕೊಟ್ಟರೆ ಭತ್ತದ ಸಸಿಯ ಬಾಡದಲ್ಲಿ ನೀರು ಇಂಗಿ ಬಿಸಿಲೊಡನೆಯುವುದೂ ಇಲ್ಲ. ಅರ್ಧಕ್ಕರ್ಧ ಬೆಳೆ ಹುಳದ ಬಾಧೆಗೆ



ಒಳಗಾಗಿ ಬೆಳೆ ನಾಶವಾಗುವುದುಂಟು. ಇಂತಹ ಪ್ರಸಂಗದಲ್ಲಿ ಅರ್ಧಾಂಶ ಬೆಳೆ ಕೈಗೆ ಬರುವುದೂ ಇಲ್ಲವೆಂದು ಹೇಳುತ್ತಾ, ಈ ವರ್ಷವೂ ಅದೇ ಹಿಂದಿನ ಚಿತ್ರಣಕ್ಕೆ ಬಂದಿದೆ. ಎಂಟಾಣೆ ಬೆಳೆ ಕೈಗೆ ಬರುವುದೂ ಕಷ್ಟವೆಂದು ನಿಟ್ಟುಸಿರು ಬಿಟ್ಟರು.

ನಷ್ಟದ ದಂಧೆ

ವ್ಯಾಪಾರಿಕವಾಗಿ ಹೇಳುವುದಾದರೆ, ನಾನು ಭತ್ತದ ಸಾಗುವಳಿಯಿಂದಲೇ ಏಳಿಗೆ ಹೊಂದಿದವನು. ಅಂದ ಮೇಲೆ ಇದರಲ್ಲಿ ಲಾಭವಿಲ್ಲವೆಂದು ಹೇಳಲಾರೆ. ಆದರೆ ಈಗಿನ ಪರಿಸ್ಥಿತಿಯೇ ಬೇರೆ. ವರ್ಷದಿಂದ ವರ್ಷಕ್ಕೆ ಸಮಸ್ಯೆಗಳ ಸರಮಾಲೆಯೇ ಆಗುತ್ತಿರುವ ಭತ್ತದ ಕೃಷಿ ಇತ್ತೀಚಿನ ವರ್ಷಗಳಲ್ಲಿ ನಷ್ಟದ ದಂಧೆಯಾಗಿ ಪರಿಣಮಿಸಿದೆಯೆಂದು ನೋವಿನಿಂದ ಹೇಳಿಕೊಂಡ ಭಟ್ಟರು, ಈ ವರ್ಷ ತಮ್ಮ ಅರ್ಧದಷ್ಟು ಗದ್ದೆಗಳು ಖಾಲಿ ಉಳಿದಿವೆಯೆಂದು ಆಕಾಶದ ಕಡೆ ನೋಡುತ್ತಾ ಹೇಳಿದರು.

ನಾಟಿಯೇ ಆಗಿಲ್ಲ

ಉಡುಪಿ ತಾಲೂಕಿನಲ್ಲಿಷ್ಟು ನಕ್ಷತ್ರದ ಮಳೆ ಕಟ್ಟ ಕಡೆಗೆ ರಭಸದಿಂದ ಬಂದು ಸ್ವಲ್ಪಮಟ್ಟಿನ ನೀರಿನ ಬವಣೆಯನ್ನು ತೀರಿಸಿದರೂ ಅಶ್ಲೇಷಾ ನಕ್ಷತ್ರ ಕೇವಲ ಮೋಡಕವಿದ ವಾತಾವರಣವಾಗಿ ಈ ವರೆಗೆ (ಆ 7) ಉಳಿದಿದೆ. ತಾಲೂಕಿನ ಅರ್ಧಾಂಶದಷ್ಟು ಗದ್ದೆಗಳಲ್ಲಿ ನಾಟಿಯೇ ಆಗಿಲ್ಲ. ಹಾಕಿದ್ದ ಅಗೆಗಳನ್ನು ನಾಶಪಡಿಸಲಾಗಿದೆ. ತಗ್ಗು ಪ್ರದೇಶದಗದ್ದೆಗಳೇನೋ ಹಸುರಿನಿಂದ ನಳನಳಿಸಿದರೂ, ಅವುಗಳ ಬೆಳವಣಿಗೆ ತೀರ ಅತೃಪ್ತಿದಾಯಕ.ಹುಳದ ಬಾಧೆ ಅಧಿಕವಾಗುತ್ತಿದೆ. ಅಪಾಯವು ಬೇಸಿಗೆಯಾಗಿ ಪರಿಣಮಿಸಿದೆ. ಎಂತಹ ಮಳೆಯ ಅಭಾವವಿದ್ದರೂ ನಾಗರ ಪಂಚಮಿಯಂದು ಮಳೆ ಬಂದೇ ಬರುತ್ತದೆ ಎಂದು ಪ್ರತೀತಿ ಇದ್ದು, ಈ ಬಾರಿ 'ಮಳೆ ಇಲ್ಲದ ನಾಗರ ಪಂಚಮಿ' ಒಂದು ವಿಶೇಷವಾಗಿದೆ!

ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಮುಂದೆ ಕೈಗೆ ಬರುವ ಬೆಳೆ ಅರ್ಧಕ್ಕಿಂತಲೂ ಕಡಿಮೆಯಾದರೆ ಆಶ್ಚರ್ಯಪಡಬೇಕಿಲ್ಲ!

ವಾರ್ತೆಗಳ ಸೇವಾ ವಿಭಾಗ, ಎಐಆರ್.

ವಾರ್ತಾವಾಚಕ–ಹಾಗೂ ಭಾಷಾಂತರಕಾರನ (ಕನ್ನಡ) ಪ್ರವರ್ಗದಲ್ಲಿ "ಕಲಾವಿದ" ರಾಗಿ ನೇಮಕಾತಿಗೆ ವಾರ್ತಾ ಸೇವೆಗಳ ನಿರ್ದೇಶಕ, ಆಕಾಶವಾಣಿ, ನವದೆಹಲಿ ಇವರು ಅರ್ಹ ವ್ಯಕ್ತಿಗಳಿಂದ ನಿರ್ದಿಷ್ಟ ಫಾರ್ಮುಗಳಲ್ಲಿ ಅರ್ಜಿಗಳನ್ನು ಆಹ್ವಾನಿಸಿರುತ್ತಾರೆ.
ಖಾಲಿ ಸ್ಥಾನಗಳ ಸಂಖ್ಯೆ: ಒಂದು (ಪರಿಶಿಷ್ಟ ಜಾತಿಗೆ ಮೀಸಲು) ಹುದ್ದೆ ದೆಹಲಿಯಲ್ಲಿದೆ.
ಕೆಲಸಕ್ಕೆ ಇರಬೇಕಾದ ಅರ್ಹತೆಗಳು ಮುಖ್ಯವಾಗಿ ಭಾಷಾಂತರ (ಇಂಗ್ಲೀಷನ್ನು ಕನ್ನಡ ಭಾಷೆಗೆ ಹಾಗೆಯೇ ಕನ್ನಡವನ್ನು ಇಂಗ್ಲೀಷ್ ಭಾಷೆಗೆ ತರ್ಜುಮೆ) ಮತ್ತು ವಾರ್ತಾ [illegible] ವಾರ್ತಾ ವ್ಯಾಖ್ಯಾನಗಳು ಹಾಗೂ ಇತರ ವಾರ್ತಾ ವಿಷಯಗಳನ್ನು ಮೈಕ್ರೋಫೋನಿನ ಮುಂದೆ ಓದುವಿಕೆ (ಅಗತ್ಯ ಬಿದ್ದಾಗ ಅಭ್ಯಾಸ ಮಾಡುವಿಕೆಯೂ ಸೇರಿದಂತೆ) ಮತ್ತು ಕಾಲಕಾಲಕ್ಕೆ ನೀಡಬಹುದಾದ ಬೇರಾವುದೇ ಕೆಲಸಗಳು.
ವಿದ್ಯಾರ್ಹತೆಗಳು, ವಯಸ್ಸು ಮತ್ತು ವೇತನ ಶ್ರೇಣಿಯ ವಿವರ.
ವಿದ್ಯಾರ್ಹತೆಗಳು (ಆವಶ್ಯಕ).
ಎ) ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವಿ ಯಾ ತತ್ಸಮ.
ಬಿ) ಪ್ರಸಾರಕ್ಕೆ ಸೂಕ್ತವಾದ ಗಂಭೀರ ಧ್ವನಿ ಅವಶ್ಯವಾಗಿರಬೇಕು.
ಸಿ) ಸರಿಯಾದ ಉಚ್ಚಾರ, ಒತ್ತು ನೀಡುವಿಕೆ, ಸ್ವರ ಬದಲಾವಣೆ ತಿಳಿದಿರಬೇಕು.
ಡಿ) ಕನ್ನಡ ಭಾಷೆಯಲ್ಲಿ ಪ್ರವೀಣತೆ
ಇ) ಇಂಗ್ಲೀಷ್‌ನಿಂದ ಕನ್ನಡ ಭಾಷೆಗೆ ಸರಿಯಾಗಿ ಮತ್ತು ತ್ವರಿತವಾಗಿ ಭಾಷಾಂತರಿಸುವ ಪ್ರವೀಣತೆ.
ಎಫ್) ಪ್ರಸಕ್ತ, ಭಾರತೀಯ ಹಾಗೂ ಅಂತಾರಾಷ್ಟ್ರೀಯ ವಿದ್ಯಮಾನಗಳ ತಿಳುವಳಿಕೆ.
ಜಿ) ಭಾರತ ಮತ್ತು ವಿದೇಶ ಎರಡರ ಪ್ರಸಿದ್ಧ ವ್ಯಕ್ತಿಗಳ ಹೆಸರುಗಳ ಸಹಿತ ಅವರ ಪರಿಚಯ.
ಎಚ್) ವಾರ್ತಾ ಪತ್ರಿಕೆಗಳು, ವಾರ್ತಾ ಏಜೆನ್ಸಿ, ಅಥವಾ ವಾರ್ತಾ ಸಂಸ್ಥೆಯಲ್ಲಿ ಅನುಭವ
ಅಪೇಕ್ಷಣೀಯ:
ಎ) ಇನ್ನೊಂದು ಭಾರತೀಯ ಭಾಷೆ ತಿಳಿದಿರಬೇಕು.
ಬಿ) ದೇವನಾಗರಿ ಲಿಪಿಯ ಪರಿಜ್ಞಾನ.
ಸಿ) ರೇಡಿಯೋ ಯಾ ನಿಯತಕಾಲಿಕಗಳು ಯಾ ಪುಸ್ತಕಗಳಿಗೆ ಲೇಖನ ಬರೆದ ಅನುಭವ.
ವಯಸ್ಸು: 1–7–1987ರಂದು 21 ಹಾಗೂ 35 ವರ್ಷಗಳ ಮಧ್ಯೆ, ಎಐಆರ್. ನಿಲಯ ಕಛೇರಿಯಲ್ಲಿ ಕ್ಯಾಶುವಲ್ ಅಸೈನೀಸ್ (ಅರ್ಟಿಸ್ಟ್/ಸಿಬ್ಬಂದಿ ಕಲಾವಿದರು) ಸುದ್ದಿ ಓದುಗರಾಗಿ ಕೆಲಸ ಮಾಡುತ್ತಿರುವವರು/ಸುದ್ದಿ ಓದುಗ–ಹಾಗೂ ಭಾಷಾಂತರಕಾರರಾಗಿ ಕೆಲಸ ಮಾಡುತ್ತಿರುವವರಿಗೆ 40 ವರ್ಷಗಳ ವರೆಗೆ ವಯಸ್ಸಿನ ಸಡಿಲಿಕೆಯಿರುತ್ತದೆ. ನಿಯಮ ರೀತ್ಯಾ ಪರಿಶಿಷ್ಟ ಜಾತಿ/ಪರಿಶಿಷ್ಟ ಬುಡಕಟ್ಟಿನವರಿಗೂ ಸಹ.
ವೇತನ: ರೂ. 2,000/- – 60 – 2,300 – ಇಬಿ – 75 – 3200 – 100 – 3500ರ ವೇತನ ಶ್ರೇಣಿಯಲ್ಲಿ ಪ್ರತಿ ತಿಂಗಳಿಗೆ ರೂ. 2,000/- + ಕಲಾವಿದರಿಗೆ ಕಾಲಕಾಲಕ್ಕೆ ಕೊಡಲವಕಾಶವಿರುವ ಭತ್ಯೆಗಳು.
ಧನಾದೇಶದ ಮೂಲಕ ಯಾ ನಗದಾಗಿ ತಲಾ ರೂ. 1/-ನ್ನು (ಪರಿಶಿಷ್ಟ ಜಾತಿ/ಪರಿಶಿಷ್ಟ ಬುಡಕಟ್ಟಿನ ಅಭ್ಯರ್ಥಿಗಳಿಗೆ 25 ಪೈಸೆ) ಪಾವತಿಸಿದಲ್ಲಿ ವಾರ್ತೆಗಳ ಸೇವಾ ನಿರ್ದೇಶಕರು, ಆಕಾಶವಾಣಿ, ನವದೆಹಲಿ, ಇವರ ಕಛೇರಿಯಿಂದ ಅರ್ಜಿ ಫಾರ್ಮುಗಳನ್ನು ಪಡೆಯಬಹುದು.
ಅಭ್ಯರ್ಥಿಗಳು, ತಮ್ಮ ಅರ್ಜಿಯೊಂದಿಗೆ ವಾರ್ತೆಗಳ ಸೇವಾ ನಿರ್ದೇಶಕರು, ಆಕಾಶವಾಣಿ, ನವದೆಹಲಿ, ಇವರ ಹೆಸರಿಗೆ ಪಡೆದ ಕ್ರಾಸ್ಡ್ ಭಾರತೀಯ ಅಂಚೆ ಆದೇಶದ ರೂಪದಲ್ಲಿ ರೂ. 5/-ರ ಅರ್ಜಿ ಶುಲ್ಕವನ್ನು (ಪರಿಶಿಷ್ಟ ಜಾತಿ/ ಪರಿಶಿಷ್ಟ ಬುಡಕಟ್ಟಿನ ಅಭ್ಯರ್ಥಿಗಳಿಗೆ ರೂ. 1.25) ಪಾವತಿಸಬೇಕು. ಶುಲ್ಕವನ್ನು ಒಳಗೊಂಡಿರದ ಅರ್ಜಿಯನ್ನು ತಿರಸ್ಕರಿಸಲಾಗುತ್ತದೆ. ಶುಲ್ಕವನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸುವುದಿಲ್ಲ.
ಅರ್ಜಿಗಳು 14-9–1987ರೊಳಗಾಗಿ ವಾರ್ತೆಗಳ ಸೇವಾ ನಿರ್ದೇಶಕ, ಆಕಾಶವಾಣಿ, ಪ್ರಸಾರ ಗೃಹ, ಪಾರ್ಲಿಮೆಂಟ್ ಬೀದಿ, ನವದೆಹಲಿ, ಇವರಿಗೆ ತಲುಪಬೇಕು ಮತ್ತು 14–9–87ರ ಬಳಿಕ ದೊರೆತ ಅರ್ಜಿಗಳನ್ನು ಯಾವುದೇ ಸಂದರ್ಭದಲ್ಲಿ ಪರಿಶೀಲಿಸುವುದಿಲ್ಲ.
ಅರ್ಜಿ ಫಾರ್ಮುಗಳನ್ನು 7–9–1987ರ ಬಳಿಕ ಮಾರಲಾಗುವುದಿಲ್ಲ.
ಈಗಾಗಲೇ ಸರ್ಕಾರಿ ಉದ್ಯೋಗದಲ್ಲಿರುವವರು ಮೇಲಧಿಕಾರಿಗಳ ಮೂಲಕ ಅರ್ಜಿ ಸಲ್ಲಿಸಬೇಕಾಗಿದ್ದು, ಅದಕ್ಕೆ ತಪ್ಪಿದಲ್ಲಿ ಅವರ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ.
ಅಭ್ಯರ್ಥಿಗಳು ಬೆಂಗಳೂರು ಆಕಾಶವಾಣಿಯಲ್ಲಿ ಜರುಗುವ ಪರೀಕ್ಷೆ ಹಾಗೂ ಸಂದರ್ಶನಕ್ಕೆ ತಮ್ಮ ಸ್ವಂತ ವೆಚ್ಚದಲ್ಲಿ ಹಾಜರಾಗಬೇಕು.
ಪರೀಕ್ಷೆ/ಸಂದರ್ಶನಕ್ಕೆ ಅಭ್ಯರ್ಥಿಗಳನ್ನು ಕರೆಯುವಾಗ, ಉನ್ನತ ವಿದ್ಯಾರ್ಹತೆ ಹಾಗೂ ಹೆಚ್ಚಿನ ಅನುಭವವಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುತ್ತದೆ.
ಆಯ್ಕೆಯಾದ ಅಭ್ಯರ್ಥಿಗಳನ್ನು ಭಾರತದ ಯಾವುದೇ ನಿಲಯಕ್ಕೆ/ಯಾವುದೇ ಭಾಗಕ್ಕೆ ವರ್ಗಾಯಿಸಲಾದೀತು.
ಆಯ್ಕೆಗೊಂಡ ಅಭ್ಯರ್ಥಿಗಳನ್ನು ಪ್ರಸ್ತುತ ಮಾಸಿಕ ಗುತ್ತಿಗೆಯ ಮೇಲೆ ನೇಮಿಸಿಕೊಳ್ಳಲಾಗುತ್ತದೆ ಮತ್ತು ಆನಂತರ 5 ವರ್ಷಗಳ ನಿಯಮಿತ ಗುತ್ತಿಗೆ [illegible] ಮೊದಲಿನ [illegible] ಸೇವೆ [illegible]
ಅರ್ಜಿಗಳ [illegible] ಯಾವುದೇ ರೀತಿಯ [illegible]
ಯಾವುದೇ ರೀತಿಯ ಪ್ರಭಾವವನ್ನು ಅಭ್ಯರ್ಥಿಯನ್ನು ಅನರ್ಹಗೊಳಿಸಲು ಕಾರಣವಾಗುತ್ತದೆ.

ಡಿಎವಿಪಿ 690 (214)/87

New Mangalore Port Trust

Advertisement No. 5/26/86-Adm-3

Applications are invited for the following post in the New Mangalore Port Trust from Indian Nationals. The post is temporary but likely to be continued indefinately.

Name of the post : Operator for Coles Crane

No. of posts: 1 reserved for ST candidate

Scale of pay: Rs. 670–20–830–EB–22–1028

Qualification: 1. Literate and must have experience at least one year in operation and handling pneumatic mobile Crane of 60 to 80 HP with 30' boom length which works with complete diesel or electric type.

2. Must have possessed Heavy Duty Driving Licence.

Age Limit: Below 35 years (Relaxable up to 5 years in the case of ST candidates)

General Instructions:

Typed applications may be sent stating the following:

1. Name (in block letters)
2. Date of birth
3. Father's name
4. Address for correspondence (in block letters)
5. Qualification/experience
6. Whether belongs to ST (Attested copy of caste Certificate to be enclosed)
7. Nearest railway station to the present residence
8. Signature of the candidate.

Application should reach the Chairman, New Mangalore Port Trust, Panambur-575 010, Dakshina Kannada, Karnataka State within 15 days from the date of publication of the advertisement. Those who are working in Govt./Quasi Govt. organisations should apply through proper channel. Travelling Allowance will be admissible equal to second class Railway fare or actual bus fare provided the distance travelled on each ways by the shortest route is more than 80 KMs by Train and 32 KMs by road as the case may be on production of relevant train/bus fare ticket for one way journey.

The above concession is not applicable to those ST candidates who are already in service.

Canvassing in any form will disqualify the candidate.

‘1990ಕ್ಕೆ ರಾಜ್ಯದಲ್ಲಿ ರೈತರ ಸರಕಾರ’

9.06.1987 June 9/87

‘1990 ಕ್ಕೆ ಈ ನೆಲದಲ್ಲಿ ರೈತರ ಸರಕಾರ ಬಂದೇ ಬರುತ್ತದೆ’

ಅವರು ಯಾವುದನ್ನೂ ಬಚ್ಚಿಡಲಿಲ್ಲ. ಮುಸುಕಿನಿಂದ ಹೊರಬಂದಂತೆ ಕಂಡ ಪ್ರೊಫೆಸರ್ ನೇರ ಮತ್ತು ಸ್ಪಷ್ಟ ಮಾತುಗಳ ಅಪ್ಪಟ ಮಣ್ಣಿನ ಮಗನ ಶೈಲಿಯಲ್ಲಿ ಮಾತನಾಡುತ್ತಿದ್ದರು.

ಶಿಬಿರದ ಕೊನೆಯ ದಿನ ಅವಸರವಸರವಾಗಿ ಓಡಿ ಬಂದ ಪ್ರೊಫೆಸರ್ ಎಂ. ಡಿ. ನಂಜುಂಡ ಸ್ವಾಮಿ ಅಸಮಾಧಾನದಲ್ಲಿದ್ದಂತೆ ಕಂಡು ಬಂದಿತ್ತು. ಕೀಚಲು ಶರೀರಕ್ಕೆ ತದ್ವಿರುದ್ಧವಾಗಿ ಕಂಚಿನ ಶರೀರ ಪಡೆದಿರುವ ಬಿಳಿಗಡ್ಡದ ಪ್ರೊಫೆಸರ್ ತುಸು ಹಠಮಾರಿ ಎಂಬ ಅಪಾದನೆಗೊಳಗಾಗಿದ್ದರೂ ರೈತರೆಲ್ಲರ ನೆಚ್ಚಿನ ‘ಯಜಮಾನ’ರಾಗಿರುವುದು ಕೂಡಾ ಅಷ್ಟೇ ನಿಜ.

ಯಜಮಾನನ ಅಸಹಾಯಕತೆ ಮತ್ತು ವಿಷಾದವನ್ನು ತುಂಬಿಕೊಂಡಂತೆ ಕಂಡರೂ

ಮುಂ: ರೈತ ಚಳವಳಿ ಇಂದು ದುರ್ಬಲವಾಗಲು ಕಳೆದ ಲೋಕ ಸಭಾ ಚುನಾವಣೆಯಲ್ಲಿ ರೈತಸಂಘ ಭಾಗವಹಿಸಿದ್ದೇ ಕಾರಣ ಎಂಬ ಆಪಾದನೆಯಿದೆ. ಈ ಹಿನ್ನೆಲೆಯಲ್ಲಿ ಇಂದಿನ ನಿಮ್ಮ ನಿರ್ಧಾರ ಹೇಗಾಗುತ್ತದೆ.

ಪ್ರೊ: ಕಳೆದ ಬಾರಿ ನಾವು ಸ್ಪರ್ಧಿಸಿದ್ದು ಲೋಕಸಭೆಗೆ. ರೈತರ ಹೆಚ್ಚಿನ ಸಮಸ್ಯೆಗಳಿಗೆ ರಾಜ್ಯ ಸರಕಾರ ಕಾರಣವಾಗಿದ್ದ ಕಾರಣ ಮತದಾರರು ತುಸು ಗೊಂದಲಕ್ಕೊಳಗಾಗಿದ್ದು ನಿಜ. ಅಲ್ಲದೆ ಆ ಚುನಾವಣೆಗೆ ಸಾಕಷ್ಟು ಪೂರ್ವ ತಯಾರಿ ಇರಲಿಲ್ಲ. ಆದರೂ ನಾವು ಗೆದ್ದ ಅಭ್ಯರ್ಥಿಯ ಕಾಲುಭಾಗದಷ್ಟು ಮತ ಪಡೆದಿದ್ದೇವೆ.

ಮುಂ: ಅಂದರೆ, ಮುಂದೆ ನೀವು ವಿಧಾನ ಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದರೆ ಸರಕಾರ ರಚಿಸುವಷ್ಟು ಬಹುಮತ ಗಳಿಸ್ತೀರಿ ಅನ್ನಿರಾ ?

1983 ರ ವರೆಗೆ ರೈತಸಂಘಟನೆ ಎಂಬುದೇ ಇರಲಿಲ್ಲ. ಆ ಹೋರಾಟಕ್ಕೆ ಸೈದ್ಧಾಂತಿಕ ನೆಲೆಗಟ್ಟು ಇರಲಿಲ್ಲ. ಅದು ಶೋಷಿತ ರೈತರ ನೋವಿನ ಕೂಗು ಆಗಿತ್ತು ಅಷ್ಟೇ. ಸಂಘಟನೆ ವೈಚಾರಿಕ ಚೌಕಟ್ಟು ಪಡೆದದ್ದು ಆ ನಂತರದ ದಿನಗಳಲ್ಲಿ. ರೈತರ ನಿಜವಾದ ಹೋರಾಟ ಈಗ ಪ್ರಾರಂಭವಾಗಿದೆ.



ನೀತಿ ಎದುರೇ ರೈತರೆಲ್ಲ ಶ್ರೀಮಂತರು. ಇವತ್ತು ಒಂದು ಮುಕ್ಕಾಲು ಎಕರೆ ಸಾಗುವಳಿ ಮಾಡುವ ರೈತ ವೃತ್ತಿತೆರಿಗೆ ಪಾವತಿ ಮಾಡಬೇಕು. ಅಂದರೆ ಆತ ಮೂರು ಸಾವಿರ ರೂಪಾಯಿ ಪಗಾರ ಪಡೆಯಲು ವಿಶ್ವವಿದ್ಯಾನಿಲಯದ ಪ್ರೊಫೆಸರ್‌ಗೆ ಸಮ. ಅದೇ ರೀತಿ ಮೂರು ಎಕರೆ ಸಾಗುವಳಿ ಮಾಡುವ ರೈತ ಆದಾಯ ತೆರಿಗೆ ಕಟ್ಟಬೇಕಾಗಿದೆ. ಈ ದೃಷ್ಟಿಯಿಂದ ನಾವು ಶ್ರೀಮಂತರೇ..

ಮುಂ: ರಾಜ್ಯಮಟ್ಟದಲ್ಲಿ ನಿಮ್ಮ ಸಂಘಟನೆ ಹೇಗಿದೆ ?

ಪ್ರೊ: ದಕ್ಷಿಣ ಕನ್ನಡ ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದೆಲ್ಲ ಜಿಲ್ಲೆಗಳಲ್ಲಿ ರೈತಸಂಘದ ಶಾಖೆಗಳಿವೆ. ಹಿಂದೆ ನಮ್ಮೊಡನೆಯೇ ಇದ್ದ ರೇವಣ್ಣಸಿದ್ಧಯ್ಯ ಎಂಬವರು ಇತ್ತೀಚೆಗೆ ಜನತಾ ಪಕ್ಷದ ಜತೆ ಸೇರಿಕೊಂಡು ಬಳ್ಳಾರಿಯಲ್ಲಿ ರೈತಸಂಘ ಕಟ್ಟಿದ್ದಾರೆ. ನಾವು ಅಲ್ಲಿಗೆ ಹೋಗಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿಯನ್ನೆ ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡವರು ಕಡಿಮೆ. ಎಲ್ಲರೂ ಜೀವನ ನಿರ್ವಹಣೆಗಾಗಿ ಬೇರೆ ಬೇರೆ ಉದ್ಯೋಗ ನೆಚ್ಚಿಕೊಂಡ ಕಾರಣ ಕೃಷಿಕ್ಷೇತ್ರದ ಸಮಸ್ಯೆಗಳು ಅವರನ್ನು ತಟ್ಟುವುದಿಲ್ಲ. ಅವರಿಗೆ ಸಂಘಟನೆಯ ಅಗತ್ಯವೇ ಇಲ್ಲವೇನೋ !

ಅವರೆಲ್ಲಿಯೂ ಮಾತಿನಲ್ಲಿ ಈ ಅಂಶವನು ವ್ಯಕ್ತಪಡಿಸಲಿಲ್ಲ. ಅವರ ಮಾತಿಗೆ ಹೊಸದಾಗಿ ರಾಜಕಾರಣದ ಜಾಣತನ ಸೇರ್ಪಡೆಯಾಗಿತ್ತು.

ರೈತ ಚಳವಳಿ ಕರ್ನಾಟಕದಲ್ಲಿ ಪರ್ಯಾಯ ರಾಜಕೀಯ ಪಕ್ಷವಾಗಿ ರೂಪುಗೊಳ್ಳಲು ತಾಲೀಮು ನಡೆಸುತ್ತಿರುವ ಹಿನ್ನೆಲೆಯಲ್ಲಿ ರೈತ ಸಂಘದ ರಾಜಕೀಯ ಒಲವಿನ ಬಗ್ಗೆ ಕೆದಕಿದಾಗ ಅವರ ಉತ್ತರ ಸಿದ್ಧವಿತ್ತು.

ಪ್ರೊ: ಈ ಮೂರನೇ ದರ್ಜೆಯ ರಾಜಕೀಯ ಪಕ್ಷಗಳು ಎಂದೂ ಜನಪರವಾಗಿ ವರ್ತಿಸುವುದಿಲ್ಲ ಎಂಬುದು ನಮಗೆ ಖಚಿತವಾಗಿದ್ದು, ಈ ಹಿನ್ನೆಲೆಯಲ್ಲಿ ನಾವು ರಾಜಕೀಯ ಶಕ್ತಿಯಾಗಿ ರೂಪುಗೊಳ್ಳುವುದು ಅನಿವಾರ್ಯವಾಗಿದೆ.

ಮುಂ: ಭಿನ್ನ ರಾಜಕೀಯ ಧೋರಣೆಗಳುಳ್ಳವರೂ ಸಮಾನ ಕಷ್ಟ–ಸುಖಗಳನ್ನು ಪಡೆದಿರಲು ಸಾಧ್ಯ. ಈ ದೃಷ್ಟಿಯಿಂದ ಸಂಘದ ರಾಜಕೀಯ ಒಲವು ಸಂಘಟನೆಯ ಮೇಲೆ ಪ್ರಭಾವ ಬೀರಲಾರದೇ?

ಪ್ರೊ: ಭಿನ್ನ ರಾಜಕೀಯ ಧೋರಣೆ ಉಳ್ಳವರು ಒಂದೇ ಸಂಘಟನೆಯ ಸೂತ್ರದೊಳಗೆ ಹೇಗೆ ಇರಲು ಸಾಧ್ಯ ? ಕಾಂಗ್ರೆಸ್ ಒಲವುಳ್ಳ ಜನರಿಗೆ ಕಾಂಗ್ರೆಸ್ ನೀತಿಯನ್ನು ವಿರೋಧಿಸುವ ರೈತ ಸಂಘದೊಳಗೆ ಇರುವ ನೈತಿಕ ಹಕ್ಕೆಲ್ಲಿದೆ ? ಅದೇ ರೀತಿ ಜನತಾ ಪಕ್ಷದ ಬಗ್ಗೆ ಮಮತೆ ಇರುವವರು ನಮ್ಮನ್ನು ಸಹಿಸಿಕೊಂಡಿರಲು ಸಾಧ್ಯವೇ?

ಪ್ರೊ: ಖಂಡಿತ. ಈ ಕ್ಷಣದಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿದರೂ ನಾವು ನೂರು ಸೀಟು ಗೆಲ್ಲುತ್ತೇವೆ. ಅಲ್ರಿ, ಹೆಗಡೆಯಂತಹ ಮೂರನೇ ದರ್ಜೆಯ ರಾಜಕಾರಣಿ ಕೇವಲ ನಮ್ಮ ಗಾಳಿಯಲ್ಲಿ ತೇಲಿಬಂದು ಅಧಿಕಾರ ಗಳಿಸುವುದಾದರೆ, ನಾವೇ ನಮ್ಮ ಸ್ವಂತ ಗಾಳಿಯಲ್ಲಿ ಚುನಾವಣೆ ಗೆಲ್ಲಲು ಸಾಧ್ಯವಿಲ್ಲವೇ ?

ಮುಂ: 1983ರ ದಿನಗಳಿಗೆ ಹೋಲಿಸಿದರೆ ಈಗ ರೈತ ಚಳವಳಿಗೆ ತುಸು ಮಂಕು ಆವರಿಸಿದಂತೆ ಕಾಣುತ್ತಿದೆಯಲ್ಲವೇ ?

ಪ್ರೊ: 1983ರ ವರೆಗೆ ರೈತಸಂಘಟನೆ ಎಂಬುದೇ ಇರಲಿಲ್ಲ. ಅಂದಿನ ಹೋರಾಟಕ್ಕೆ ಸೈದ್ಧಾಂತಿಕ ನೆಲೆಗಟ್ಟು ಇರಲಿಲ್ಲ. ಅದು ಶೋಷಿತ ರೈತರ ನೋವಿನ ಕೂಗು ಆಗಿತ್ತು ಅಷ್ಟೇ. ಸಂಘಟನೆ ವೈಚಾರಿಕ ಚೌಕಟ್ಟು ಪಡೆದದ್ದು ಆ ನಂತರದ ದಿನಗಳಲ್ಲಿ. ರೈತರ ನಿಜವಾದ ಹೋರಾಟ ಈಗ ಪ್ರಾರಂಭವಾಗಿದೆ.

ಮುಂ: ಗುಂಡೂರಾಯರ ಕಾಂಗ್ರೆಸ್ ಸರಕಾರದ ಪತನದಲ್ಲಿ ರೈತ ಚಳವಳಿಯ ಪ್ರಧಾನ ಪಾತ್ರವಿತ್ತು. ಭಾಷಾ ಚಳವಳಿ ಮತ್ತು ದಲಿತ ಚಳವಳಿ ಕೂಡಾ ಆಗ ಅಷ್ಟೇ ಪ್ರಬಲವಾಗಿತ್ತು. ಈ ಮೂರು ಚಳವಳಿಗೂ ಜನತಾ ಆಳ್ವಿಕೆಯ ಕಾಲದಲ್ಲಿ ನಿಷ್ಕ್ರಿಯಗೊಂಡಂತೆ ಕಾಣುತ್ತಿಲ್ಲವೇ ?

ಪ್ರೊ: 1980ರಲ್ಲಿ ರೈತ ಚಳವಳಿ ಪ್ರಾರಂಭವಾದಾಗ ಕರ್ನಾಟಕದಲ್ಲಿ ಜನತಾಪಕ್ಷವೆಂಬುದೇ ಇಲ್ಲ ಎನ್ನುವಷ್ಟರ ಮಟ್ಟಿನ ದುಃಸ್ಥಿತಿಯಲ್ಲಿತ್ತು. ಆ ದಿನಗಳಲ್ಲಿ ಆ ಪಕ್ಷದ ಕೆಲವರು ನಮ್ಮ ಹೋರಾಟದಲ್ಲಿ ಜತೆಯಲ್ಲಿದ್ದರು. ನಾವೆಲ್ಲ ಕೂಡಿ ನಮ್ಮ ಸಮಾನ ವೈರಿಯಾದ ಕಾಂಗ್ರೆಸ್ ವಿರುದ್ಧ ಹೋರಾಟ ನಡೆಸುತ್ತಿದ್ದ ದಿನಗಳವು. ಮುಂದಿನ ಚುನಾವಣೆಯಲ್ಲಿ ಜನತಾ ಪಕ್ಷ ಗೆದ್ದಾಗ ಅವರು ನಮ್ಮವರುಎನ್ನುವ ಭಾವನೆ ರೈತರಲ್ಲಿದ್ದ ಕಾರಣ ಅವರು ತುಸು ಸೌಮ್ಯವಾಗಿದ್ದರು. ಆದರೆ ನಿಧಾನವಾಗಿ ಅವರ ಬಣ್ಣ ಕೂಡಾ ರೈತರಿಗೆ ಗೊತ್ತಾಗಿದೆ.

ಮುಂ: ಆದರೂ ರೈತಸಂಘ ಗಮನ ಸೆಳೆಯುವಂತಹ ಚಟುವಟಿಕೆಗಳನ್ನು ನಡೆಸುತ್ತಿರುವಂತೆ ಕಾಣುತ್ತಿಲ್ಲವಲ್ಲ.

ಪ್ರೊ: ನಾವು ಪತ್ರಿಕೆಗಳ ಗಮನ ಸೆಳೆಯಲು ವಿಫಲರಾಗಿದ್ದೇವೆ ಅಷ್ಟೇ.

ಮಾತುಕತೆ:

ದಿನೇಶ್ ಅಮಿನ್ ಮಟ್ಟು

ಗ್ರಾಮೀಣ ಮಟ್ಟದಲ್ಲಿ ರೈತ ಚಳವಳಿ ಬಲಗೊಳ್ಳುತ್ತಿದೆ. ರೈತರಲ್ಲಿ ತಿಳುವಳಿಕೆ ಮೂಡಿಸುವ ಅವರನ್ನು ಜಾಗೃತಗೊಳಿಸುವ ಇಂತಹ ಅಧ್ಯಯನ ಶಿಬಿರ, ಚರ್ಚೆ–ಭಾಷಣಗಳೆಲ್ಲ ನಡೆಯುತ್ತಲೇ ಇವೆ. ಆದರೆ ಪತ್ರಿಕೆಗಳಲ್ಲಿ ವರದಿಯಾಗುತ್ತಿಲ್ಲ ಅಷ್ಟೇ.

ಮುಂ: ಕೃಷಿ ಕೂಲಿ ಕಾರ್ಮಿಕರ ಒಂದು ದೊಡ್ಡ ವರ್ಗ ಇತ್ತೀಚೆಗೆ ರೈತ ಚಳವಳಿಯ ಮುಖ್ಯ ಪ್ರವಾಹದಿಂದ ತುಸು ದೂರ ಸರಿದು ನಿಂತಿರುವುದು ಚಳವಳಿಯ

“ಹೆಗಡೆಯಂತಹ ಮೂರನೇ ದರ್ಜೆ ರಾಜಕಾರಣಿ ಕೇವಲ ನಮ್ಮ ಗಾಳಿಯಲ್ಲಿ ತೇಲಿಬಂದು ಅಧಿಕಾರ ಗಳಿಸುವುದಾದರೆ ನಾವೇ ನಮ್ಮ ಸ್ವಂತ ಗಾಳಿಯಲ್ಲಿ ಚುನಾವಣೆ ಗೆಲ್ಲಲು ಸಾಧ್ಯವಿಲ್ಲವೇ...”

ಹಿನ್ನಡೆಗೆ ಕಾರಣವೆನಿಸುವುದಿಲ್ಲವೇ ?

ಪ್ರೊ: ಕೃಷಿ ಕೂಲಿ ಕಾರ್ಮಿಕರು ನಮ್ಮೊಡನೆಯೇ ಇದ್ದಾರೆ. ರೈತ ಮತ್ತು ಕೃಷಿ ಕೂಲಿ ಕಾರ್ಮಿಕರ ನಡುವಿನ ಸಂಬಂಧದಲ್ಲಿ ಬಿರುಕು ಹುಟ್ಟಿಸಿ ಚಳವಳಿಯನ್ನು ಒಡೆಯುವ ಸಂಚು ಇತ್ತೀಚೆಗೆ ನಡೆಯುತ್ತಿದೆ ಅಷ್ಟೇ.

ಮುಂ: ಇಲ್ಲಿ ಮೂರು ದಿನ ನಡೆದ ರೈತ ಅಧ್ಯಯನ ಶಿಬಿರದಲ್ಲಿಯೂ ಒಬ್ಬನೇ ಒಬ್ಬ ಕೃಷಿ ಕೂಲಿ ಕಾರ್ಮಿಕ ಭಾಗವಹಿಸಿಲ್ಲ.

ಪ್ರೊ: ಇಂತಹ ಅಧ್ಯಯನ ಶಿಬಿರಗಳು ಅವರಿಗೆ ನೇರವಾಗಿ ಸಂಬಂಧಿಸಿರದ ಕಾರಣ ಅವರ್ಯಾರು ಭಾಗವಹಿಸಿಲ್ಲ.

ಮುಂ: ಅವರಿಗೆ ನೇರವಾಗಿ ಸಂಬಂಧಿಸಿದ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿದ್ದರೆ ಅವರನ್ನೂ ಭಾಗವಹಿಸುವಂತೆ ಮಾಡಬಹುದಿತ್ತಲ್ಲ.

ಪ್ರೊ: ಇಲ್ಲಿಯೂ ಅವರ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ.

ಮುಂ: ರೈತ ಚಳುವಳಿ ಕೇವಲ ಶ್ರೀಮಂತ ರೈತರ ಕೂಟ ಎಂಬ ಆಪಾದನೆಯಿದೆಯಲ್ಲಾ ?

ಪ್ರೊ: ಸರಕಾರದ ಕುರುಡು ಆರ್ಥಿಕ

ಮುಂ: ಮತ್ತೆ ರೈತ ಸಂಘದ ರಾಜಕೀಯ ಪ್ರವೇಶದ ಬಗ್ಗೆ ಪ್ರಶ್ನೆ. ರಾಜಕೀಯ ಭ್ರಷ್ಟಾಚಾರದ ಮೂಲ ಚುನಾವಣೆಯ ದಿನದಿಂದಲೇ ಪ್ರಾರಂಭವಾಗುತ್ತದೆ. ಇಂದು ಚುನಾವಣೆಯಲ್ಲಿ ಗೆಲ್ಲುವುದೆಂದರೆ ಹಣದೊಂದಿಗೆ ಜಂಜಾಟ ನಡೆಸಿದಂತೆ. ಈ ವಿಷ ವೃತ್ತಕ್ಕೆ ಸಿಲುಕದಂತೆ ರೈತ ಸಂಘ ಎಚ್ಚರಿಕೆ ವಹಿಸುವುದೇ ?

ಪ್ರೊ: ನಾನು ಒಂದು ಸಣ್ಣ ಉದಾಹರಣೆಯೊಂದಿಗೆ ಉತ್ತರಿಸುತ್ತೇನೆ. ಇತ್ತೀಚೆಗೆ ರೈತ ಸಂಘ ಮಂಡ್ಯದಲ್ಲಿ ಜಿಲ್ಲಾ ಪರಿಷತ್ ಚುನಾವಣೆಗೆ ಸ್ಪರ್ಧಿಸಿತ್ತು. ಜನತಾ ಮತ್ತು ಕಾಂಗ್ರೆಸ್ ಪಕ್ಷಗಳು, “ಜನರನ್ನು ಒಂದು ರಾತ್ರಿಯೊಳಗೆ ತಿರುಗಿಸುತ್ತೇವೆ” ಎಂದು ಕೊಚ್ಚಿಕೊಳ್ಳುತ್ತಿದ್ದರು.ನಮ್ಮೊಡನೆ ಹಣವಿರಲಿಲ್ಲ. ಜನರಿಂದ ವಂತಿಗೆ ಸಂಗ್ರಹಿಸಿ ಖರ್ಚು ಮಾಡಿದ್ದೆವು. ಚುನಾವಣೆಯಲ್ಲಿ ನಾವು ಗೆದ್ದೆವು. ಖರ್ಚು ಕಳೆದು ನಮ್ಮಲ್ಲಿ 700 ರೂ. ಉಳಿದಿತ್ತು. ಇದು ನಾವು ಚುನಾವಣೆಯಲ್ಲಿ ಸ್ಪರ್ಧಿಸುವ ವಿಧಾನ.

ಚಡಪಡಿಸುತ್ತಿದ್ದ ನಂಜುಂಡ ಸ್ವಾಮಿಯವರನ್ನು ಮತ್ತಷ್ಟು ಪ್ರಶ್ನೆಗಳಮೂಲಕ ಕಟ್ಟಿಹಾಕಿ ಕುಳ್ಳಿರಿಸಲು ನನಗೆ ಸಾಧ್ಯವಾಗಲಿಲ್ಲ. ಆಗಲೇ ಅವರು ಹಸಿರು ಶಾಲನ್ನು ಕೊಡವಿಕೊಂಡು ಏಳಬೇಕಿದ್ದರು.

ತಾಳ ಮದ್ದಳೆ ಕ್ಷೇತ್ರಕ್ಕೆ ಎಡನೀರಿನ ಕೊಡುಗೆ

ಮದ್ರಾಸಿನಲ್ಲಿ ವಿಶ್ಲೇಷಣೆ

ಮದ್ರಾಸ್ ಜೂ. 8– ತಾಳಮದ್ದಳೆಯ ಕ್ಷೇತ್ರಕ್ಕೆ ಕಾಸರಗೋಡಿನಎಡನೀರು ಮಠದ ಕೊಡುಗೆ ಬಹು ದೊಡ್ಡದು ಅಲ್ಲಿ ಎಂ. ಆರ್. ಶಾಸ್ತ್ರಿ, ಕೀರಿಕ್ಕಾಡು ವಿಷ್ಣು ಮಾಸ್ತರ್, ಶೇಣಿ, ದೇರಾಜೆಮೊದಲಾದ ತಾಳ ಮದ್ದಳೆಯ ದಿಗ್ಗಜಗಳಅರ್ಥಗಳ ಒಂದು ದೊಡ್ಡ ಕಣಜವೇ ಇದೆ ಎಂಬುದಾಗಿ ಯಕ್ಷಗಾನ ಅರ್ಥದಾರಿ ಕೆ. ಶ್ರೀಕರ ಭಟ್ ಅವರು ಹೇಳಿದ್ದಾರೆ.

ದೇರಾಜೆ ಸೀತಾರಾಮಯ್ಯ ಸಂಸ್ಮರಣ ಸಮಿತಿಯು ಸಭೆಯೊಂದರಲ್ಲಿ ಇತ್ತೀಚೆಗೆ ಮಾತನಾಡುತ್ತಿದ್ದ ಅವರುಎಡನೀರು ಮಠಕ್ಕೂ ದೇರಾಜೆಯವರಿಗೂ ಇದ್ದ ಸುಮಧುರ ಸಂಬಂದವನ್ನು ಸ್ಮರಿಸುತ್ತಾ ಹೊಸ ತಲೆಮಾರಿನವರಿಗೆ ಹಲವು ಅಂಶಗಳಿಂದ ಮಾರ್ಗದರ್ಶಕವಾಗಬಲ್ಲ ಅಪೂರ್ವವಾದ ಧ್ವನಿ ಮುದ್ರಿಕೆಗಳಿವೆ. ದೇರಾಜೆಯವರು ಹೇಳಿದ ಭೂಕೈಲಾಸದ ರಾವಣ, ಪೂತನಿ, ಶಿಶುಪಾಲ, ಇತ್ಯಾದಿ ಅರ್ಥಗಳ ಮುದ್ರಿಕೆಗಳೂ ಅಲ್ಲಿವೆ ಎಂದು ಜ್ಞಾಪಿಸಿದರು.

ತಾಳ ಮದ್ದಳೆಯ ಅರ್ಥಗಾರಿಕೆಕುರಿತು ವಿಚಾರ ವಿಮರ್ಶೆ ಸಂಶೋಧನೆ ನಡೆಸುವವರಿಗೆ ಎಡನೀರು ಮಠ ಒಂದು ಆಕರವಾಗಿದೆ ಎಂದವರು ನುಡಿದರು.

ಎಡನೀರು ಮಠದ ಕೇಶವಾನಂದ ಭಾರತಿ ಸ್ವಾಮೀಜಿ, ಪ್ರೊ. ಎಸ್. ವಿ. ಪರಮೇಶ್ವರ ಭಟ್ ಧರ್ಮಸ್ಥಳದಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರು ದೇರಾಜೆ ಸಂಸ್ಮರಣ ಸಮಿತಿಹಮ್ಮಿಕೊಂಡಿರುವ ಯೋಜನೆ ಬಗೆಗೆ ಮೆಚ್ಚುಗೆಸೂಚಿಸಿ ಯಶಸ್ಸು ಹಾರೈಸಿರುವರು ಎಂಬುದಾಗಿ ಯೂ ಸಂಚಾಲಕ ಕೆ. ಶ್ರೀಕರ ಭಟ್ ಈ ಸಂದರ್ಭದಲ್ಲಿ ತಿಳಿಸಿದರು.

ಕೆನರಾ ಬ್ಯಾಂಕಿನ ಎ ಜಿ ಎಂ ಎ. ವಿ. ವಿ. ಪ್ರಭು ಶ್ರೀನಿವಾಸಶೆಟ್ಟಿ, ಬಿ.ಪ್ರೇಮಾನಂದ ಕಿಶೋರ್ ಮೊದಲಾದವರು ಸಂದರ್ಭೋಚಿತವಾಗಿ ಮಾತನಾಡಿದರು.

ಕಾಸರಗೋಡು ಲೇಖಕರಿಗೆ ಕರ್ನಾಟಕದ ನೆರವು ಅಗತ್ಯ

ಕಾಸರಗೋಡು, ಜೂ. 8- ಸಾಂಸ್ಕೃತಿಕವಾಗಿ ಕರ್ನಾಟಕದ ಅಂಗವೇ ಆಗಿರುವ ಕಾಸರಗೋಡಿನ ಕನ್ನಡ ಲೇಖಕರಿಗೆ ಕರ್ನಾಟಕ ಸರಕಾರವು ನೆರವು ನೀಡಿ ಅವರ ಕೃತಿಗಳು ಬೆಳಕು ಕಾಣುವಂತೆ ಮಾಡಬೇಕೆಂದು ಸಾಹಿತಿ ಕಯ್ಯಾರ ಕಿಞ್ಞಣ್ಣ ರೈ ಅವರು ಅಭಿಪ್ರಾಯಪಟ್ಟರು.

ಸ್ಥಳೀಯ ಟೌನ್ ಬ್ಯಾಂಕ್ ಸಭಾಭವನದಲ್ಲಿ ಎಂ. ಗಂಗಾಧರ ಭಟ್ ಅವರ ಮೂರನೇಯ ಕವನ ಸಂಕಲನ 'ನಾಕ ನರಕ'ವನ್ನು ಇತ್ತೀಚೆಗೆ ಬಿಡುಗಡೆಗೊಳಿಸಿ ಮಾತನಾಡುತ್ತಿದ್ದರು. ಈ ಕೃತಿಯನ್ನು ಕಾಸರಗೋಡು ಮುದ್ರಣ ಮತ್ತು ಪ್ರಕಾಶನ ಸಹಕಾರೀ ಸಂಘವು (ಕಾಸರಗೋಡು ಪ್ರಿಂಟಿಂಗ್ ಎಂಡ್ ಪಬ್ಲಿಶಿಂಗ್ ಕೋಪರೇಟಿವ್ ಸೊಸೈಟಿ) ಪ್ರಕಟಿಸುತ್ತಿದೆ.

ಸಹಕಾರೀ ಸಂಘ ಇದೀಗ ಎಲ್ಲಾ ಕ್ಷೇತ್ರಗಳಿಗೆ ಪಸರಿಸಿದೆ. ಲೇಖಕರಿಗಂತೂ ಸ್ವಂತ ಕೃತಿ ಪ್ರಕಟಣೆ ಕಷ್ಟವಾಗಿರುವಾಗ ಸಹಕಾರೀ ಪ್ರಕಾಶನಗಳು ವರದಾನಗಳಾಗಿವೆ. ಕೇರಳದಲ್ಲಿ ಈ ರೀತಿಯ ಪ್ರಕಾಶನಗಳು ಯಶಸ್ವಿಯಾಗಿವೆ. ಕನ್ನಡ-ಮಲಯಾಳಸಂಸ್ಕೃತಿಗಳ ಸಂಗಮ ಸ್ಥಳವಾಗಿರುವ ಕಾಸರಗೋಡಿನಲ್ಲಿ ಉಭಯ ಭಾಷೆಗಳ ಮೌಲಿಕ ಕೃತಿಗಳು ಸಹಕಾರೀ ಪ್ರಕಾಶನದ ಮೂಲಕ ಪ್ರಕಟವಾಗಿ ಲೇಖಕರಿಗೂ ಸಾಹಿತ್ಯಾಸಕ್ತರಿಗೂ ಉಪಕಾರವಾಗಲಿ ಎಂದೂ ಆಶ್ವ ಹಾರೈಸಿ ಕವಿಗೆ ಹಾರಾರ್ಪಣೆಗೈದು ಗೌರವಿಸಿದರು.

ಕೃತಿಯ ಕುರಿತು ವಿಮರ್ಶಾತ್ಮಕ ಉಪನ್ಯಾಸ ನೀಡಿದ ಸಹಕಾರೀ ಕಾಲೇಜಿನ ಕನ್ನಡ ಪ್ರಾಧ್ಯಾಪಿಕೆ ಯು. ಮಹೇಶ್ವರಿ ಅವರು ನವ್ಯ ಕವಿಯೆಂದು ಪ್ರಸಿದ್ಧರಾಗಿರುವ ಗಂಗಾಧರ ಭಟ್ಟರು ಈ ಸಂಕಲನದಲ್ಲಿ ತಾವು ಎಷ್ಟು ಸಮರ್ಥ ಭಾವಗೀತಕಾರರೆಂಬುದನ್ನೂ ತೋರಿಸಿಕೊಟ್ಟಿದ್ದಾರೆ. ವಸ್ತು ವೈವಿಧ್ಯ, ಗೇಯತೆ ಹಾಗೂ ತಾತ್ವಿಕತೆಗಳಿಂದ "ನಾಕ ನರಕ"ದ ಕವನಗಳು ನಮ್ಮ ಹೃದಯವನ್ನು ತಟ್ಟುತ್ತವೆ ಎಂದು ನುಡಿದರು.

ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ಎಂ. ಅಹಮ್ಮದ್, ಜಿಲ್ಲಾ ಸಹಕಾರೀ ಬ್ಯಾಂಕ್‌ನ ಜನರಲ್ ಮೆನೇಜರ್ ಬಿ. ರಾಮದಾಸ್ ಶುಭಾಶಂಸನೆ ಗೈದರು. ಎಂ. ವಿ. ಬಳ್ಳುಳ್ಳಾಯ ಅವರು ಬಿಡುಗಡೆಗೊಂಡ ಪುಸ್ತಕದ ಕೆಲವು ಕವನಗಳನ್ನು ಸುಶ್ರಾವ್ಯವಾಗಿ ಹಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಹಕಾರೀ ಸಂಘಗಳ ಜೊಯಿಂಟ್ ರಿಜಿಸ್ಟ್ರಾರ್ ವಿ. ಅಬ್ದುಲ್ ರಹಿಮಾನ್ ಅವರು ಕೃತಿ ಪ್ರಕಟಿಸುತ್ತಿರುವ ಮುದ್ರಣ ಮತ್ತು ಪ್ರಕಾಶನ ಸಹಕಾರೀ ಸಂಘಕ್ಕೆ ಪುಸ್ತಕ ಪ್ರಕಟಣೆಗೆ ಪೂರ್ಣ ನೆರವು ನೀಡುವುದಾಗಿ ಭರವಸೆಯಿತ್ತರು. ಕವಿ ಗಂಗಾಧರ ಭಟ್ ತಮ್ಮ ಕಾವ್ಯ ಬೆಳೆದ ಬಗೆಯನ್ನು ವಿವರಿಸಿದರು.

ಎಂ. ನಿಶಾ ಅವರ ಪ್ರಾರ್ಥನೆಯೊಂದಿಗೆ ಆರಂಭಗೊಂಡ ಸಮಾರಂಭದಲ್ಲಿ ಸಂಘದ ನಿರ್ದೇಶಕರಲ್ಲೊಬ್ಬರಾದ ನ್ಯಾಯವಾದಿ ಅಡೂರು ಉಮೇಶ ನಾಯಕ್ ಸ್ವಾಗತಿಸಿದರು. ಇನ್ನೊಬ್ಬ ನಿರ್ದೇಶಕರಾದ ವೈ. ಎಸ್. ಬಾಲಕೃಷ್ಣ ಭಟ್ ಸಂದೇಶ ವಾಚನಗೈದರು ಕಾರ್ಯದರ್ಶಿ ಎಂ. ಬೇಬಿ ನಾಯರ್ ಪುಸ್ತಕ ಪ್ರಕಟಣೆಯ ವಿವರ ನೀಡಿದರು. ನಿರ್ದೇಶಕ ಮಂಡಳಿ ಸದಸ್ಯ ಎಂ. ಪಿ. ಕೃಷ್ಣನ್ ನಾಯರ್ ವಂದಿಸಿದರು. ಇನ್ನೊಬ್ಬ ನಿರ್ದೇಶಕ ಟಿ. ಶಂಕರನಾರಾಯಣ ಭಟ್ ಕಾರ್ಯಕ್ರಮ ನಿರೂಪಣೆ ಗೈದರು.

ಪಡುಬಿದ್ರಿ ಗಣಪತಿ ಹೈಸ್ಕೂಲಿನ ಮುಷ್ಕರ ಹಿಂತೆಗೆತ

ಪಡುಬಿದ್ರಿ, ಜೂ. 8– ಪಡುಬಿದ್ರಿ ಗಣಪತಿ ಪ್ರೌಢ ಶಾಲೆಯಲ್ಲಿ ಎಂಟನೇ ತರಗತಿಗೆ ಪ್ರವೇಶ ನಿರಾಕರಿಸಲ್ಪಟ್ಟ ಸುಮಾರು ಮೂವತ್ತು ಮಂದಿ ವಿದ್ಯಾರ್ಥಿಗಳಿಗೆ ಪ್ರವೇಶಕ್ಕೆ ಒತ್ತಾಯಿಸಿ ಕಳೆದ ಎರಡು ದಿನಗಳಿಂದ ನಡೆಯುತ್ತಿದ್ದ ಅಮರಣಾಂತ ಉಪವಾಸವನ್ನು ಪಡುಬಿದ್ರಿ ...

ಪಡುಬಿದ್ರಿ ಜಿಲ್ಲಾ ಪರಿಷತ್ ಸದಸ್ಯ ರವೀಂದ್ರನಾಥ ಜಿ. ಹೆಗ್ಡೆ, ಶಾಂತಿ ಸಮಿತಿ ಸದಸ್ಯ ವೈ. ಜಗನ್ನಾಥ ಶೆಟ್ಟಿ, ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಹಳೇ ವಿದ್ಯಾರ್ಥಿ ಮುಖಂಡರೊಂದಿಗೆ ಮಾತುಕತೆ ನಡೆದು, ವಿದ್ಯಾರ್ಥಿಗಳಿಗೆ ಪ್ರವೇಶ ದೊರಕುವ ಮೂಲಕ ಶಾಂತಯುತವಾಗಿ ...

ಪಕ್ಷಿ ಹಾಗೂ ಪಕ್ಷಿಧಾಮ ಬಗ್ಗೆ ಉಪನ್ಯಾಸ

ಉಡುಪಿ, ಜೂ. 8–ಕೆನರಾಬ್ಯಾಂಕ್, ಉಡುಪಿ ವಿಭಾಗೀಯ ಕಚೇರಿಯ "ಅಧ್ಯಯನ ವೃತ್ತ"ದ ಆಶ್ರಯದಲ್ಲಿ ಡಾ| ಎನ್. ಎ. ಮಧ್ಯಸ್ಥರ ಉಪನ್ಯಾಸ ಕಾರ್ಯಕ್ರಮವೊಂದನ್ನು ಇತ್ತೀಚೆಗೆ ಇಲ್ಲಿ ಏರ್ಪಡಿಸಲಾಗಿತ್ತು.

"ಪಕ್ಷಿಗಳು ಹಾಗೂ ಪಕ್ಷಿಧಾಮಗಳು" ಎಂಬ ವಿಷಯದ ಕುರಿತು ವಿದ್ವತ್ಪೂರ್ಣವಾಗಿ ಮಾತನಾಡಿದ ಡಾ| ಮಧ್ಯಸ್ಥರು ಪಕ್ಷಿ ಪ್ರಪಂಚದ ಅದ್ಭುತಗಳನ್ನು ವಿವರಿಸಿ ಪಕ್ಷಿಗಳಲ್ಲಿಯ ವಿವಿಧ ಪ್ರಕಾರಗಳು, ಅವುಗಳ ದೇಹ ರಚನೆ, ಸ್ವಭಾವ, ಆಹಾರ ಇತ್ಯಾದಿಗಳ ಬಗ್ಗೆ ತಿಳುವಳಿಕೆ ನೀಡಿದರು.

ಪಕ್ಷಿಗಳ ವಿಶಿಷ್ಟ ಗುಣಗಳನ್ನು ಹೇಳಿದ ಅವರು, ಪಕ್ಷಿ ಹಾಗೂ ಮಾನವನ ಮಧ್ಯೆ ಇರುವ ಗಾಢ ಸಂಬಂಧದ ಬಗ್ಗೆ ಮಾತನಾಡಿದರು. ಉಪನ್ಯಾಸದ ನಂತರ ತಾವೇ ಸೆರೆಹಿಡಿದ ವಿವಿಧ ಪಕ್ಷಿಗಳ ಚಿತ್ರಗಳನ್ನು 'ಸ್ಲೈಡ್' ಮೂಲಕ ಪ್ರದರ್ಶಿಸಿ ವಿವರಿಸಿದರು.

ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ವರ್ಗಾವಣೆಗೆ ಒತ್ತಾಯ

ಕುಮಟಾ, ಜೂ. 8–ಉ. ಕ. ವೃತ್ತದ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿಯನ್ನು ಧಾರವಾಡದಿಂದ ಶಿರಸಿಗೆ ವರ್ಗಾಯಿಸಲು ತುರ್ತು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲು ಮುಖ್ಯಮಂತ್ರಿಗಳಲ್ಲಿ ನಿಯೋಗ ಹೋಗಲು ನಿರ್ಧರಿಸಿರುವುದಾಗಿ ಸಂಸತ್ ಸದಸ್ಯ ಜಿ. ದೇವರಾಯ ನಾಯ್ಕ ಹೇಳಿದ್ದಾರೆ.

ಈ ಬಗ್ಗೆ ಲಿಖಿತ ಪತ್ರವೊಂದನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಬರೆದಿರುವ ದೇವರಾಯ ನಾಯ್ಕ, ಕಚೇರಿ ವರ್ಗಾವಣೆಗೆ 1983 ರಲ್ಲೇ ಆದೇಶವಾಗಿದ್ದರೂ ಈವರೆಗೂ ಕಾರ್ಯಗತಗೊಳ್ಳದಿರುವ ವಿಳಂಬವನ್ನು ಇನ್ನು ಜನತೆ ಹಾಗೂ ಜನಪ್ರತಿನಿಧಿಗಳು ಸಹಿಸರು ಎಂದು ಎಚ್ಚರಿಸಿದ್ದಾರೆ.

ಕಟ್ಟಡ ಕೊರತೆಯ ಸಬೂಬು ಹೇಳದೆ ಲಭ್ಯವಿರುವ ಕಟ್ಟಡಕ್ಕೆ ತಕ್ಷಣ ಕಚೇರಿಯನ್ನು ವರ್ಗಾಯಿಸದೇ ಹೋದಲ್ಲಿ ಹೋರಾಟವನ್ನು ಆರಂಭಿಸಬೇಕಾದೀತೆಂದು ನಾಯ್ಕ ತಿಳಿಸಿದ್ದಾರೆ.

ಸಚ್ಚಾರಿತ್ರ್ಯದಿಂದ ಶಿಸ್ತುಬದ್ಧವಾದ ಜೀವನ ಸಾಧ್ಯ

ಬಸ್ರೂರು, ಜೂ. 8– ಶಿಸ್ತುಬದ್ಧ ಜೀವನದಿಂದ ಸಮಾಜದಲ್ಲಿ ಶ್ರದ್ಧೆ, ಭಕ್ತಿ,